# ಭಾರತ ದೂರ ಸಂಪರ್ಕ ವಿನಿಯಾಮಕ ಪ್ರಾಧಿಕಾರ ಅಧಿನಿಯಮ, 1997

**(30.03.09ರ ಭಾರತ ವಿಶೇಷ ರಾಜಪತ್ರದ IXನೇ ಭಾಗದ 1ನೇ ವಿಭಾಗದ 40ನೇ ಸಂಪುಟದ 1ನೇ ಸಂಚಿಕೆಯಲ್ಲಿ 149 ರಿಂದ 172ರ ವರೆಗಿನ ಪುಟಗಳಲ್ಲಿ ಪ್ರಕಟವಾಗಿದೆ)**

## ಪ್ರಕರಣಗಳ ಅನುಕ್ರಮಣಿಕೆ

**ಪ್ರಕರಣಗಳು:**


### ಅಧ್ಯಾಯ –I
### ಪ್ರಾರಂಭಿಕ

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಪರಿಭಾಷೆಗಳು

### ಅಧ್ಯಾಯ–II
### ಭಾರತ ದೂರಸಂಪರ್ಕ ವಿನಿಯಾಮಕ ಪ್ರಾಧಿಕಾರ

3. ಪ್ರಾಧಿಕಾರದ ಸ್ಥಾಪನೆ ಮತ್ತು ನಿಗಮನ
4. ಅಧ್ಯಕ್ಷ ಮತ್ತು ಇತರ ಸದಸ್ಯರ ನೇಮಕಕ್ಕೆ ಇರಬೇಕಾದ ಅರ್ಹತೆಗಳು
5. ಅಧ್ಯಕ್ಷ ಮತ್ತು ಇತರ ಸದಸ್ಯರ ಪದಾವಧಿ, ಸೇವಾ ಷರತ್ತುಗಳು, ಇತ್ಯಾದಿ
6. ಅಧ್ಯಕ್ಷನ ಮತ್ತು ಉಪಾಧ್ಯಕ್ಷನ ಅಧಿಕಾರಗಳು
7. ಕೆಲವು ಸಂದರ್ಭಗಳಲ್ಲಿ ಸದಸ್ಯನನ್ನು ಪದದಿಂದ ತೆಗೆದುಹಾಕುವುದು ಮತ್ತು ಅಮಾನತುಗೊಳಿಸುವುದು
8. ಸಭೆಗಳು
9. ಖಾಲಿಸ್ಥಾನಗಳು, ಇತ್ಯಾದಿಗಳು, ಪ್ರಾಧಿಕಾರದ ವ್ಯವಹರಣೆಗಳನ್ನು ಅಸಿಂಧುಗೊಳಿಸತಕ್ಕದ್ದಲ್ಲ
10. ಪ್ರಾಧಿಕಾರದ ಅಧಿಕಾರಿಗಳು ಮತ್ತು ಇತರ ನೌಕರರು

### ಅಧ್ಯಾಯ –III
### ಪ್ರಾಧಿಕಾರದ ಅಧಿಕಾರಗಳು ಮತ್ತು ಪ್ರಕಾರ್ಯಗಳು

11. ಪ್ರಾಧಿಕಾರದ ಪ್ರಕಾರ್ಯಗಳು
12. ಮಾಹಿತಿಯನ್ನು ತರಿಸಿಕೊಳ್ಳಲು, ತನಿಖೆಗಳು ಇತ್ಯಾದಿಗಳನ್ನು ನಡೆಸಲು, ಪ್ರಾಧಿಕಾರದ ಅಧಿಕಾರಗಳು
13. ನಿರ್ದೇಶನಗಳನ್ನು ನೀಡಲು ಪ್ರಾಧಿಕಾರದ ಅಧಿಕಾರ

### ಅಧ್ಯಾಯ –IV
### ಅಪೀಲು ನ್ಯಾಯಾಧಿಕರಣ

14. ಅಪೀಲು ನ್ಯಾಯಾಧಿಕರಣದ ಸ್ಥಾಪನೆ
14ಎ. ವಿವಾದಗಳ ಇತ್ಯರ್ಥಕ್ಕೆ ಅರ್ಜಿ ಮತ್ತು ಅಪೀಲು ನ್ಯಾಯಾಧಿಕರಣಕ್ಕೆ ಅಪೀಲುಗಳು
14ಬಿ. ಅಪೀಲು ನ್ಯಾಯಾಧಿಕರಣದ ರಚನೆ
14ಸಿ. ಅಧ್ಯಕ್ಷನ ಮತ್ತು ಸದಸ್ಯರ ನೇಮಕಕ್ಕೆ ಅರ್ಹತೆಗಳು
14ಡಿ. ಪದಾವಧಿ
14ಇ. ಸೇವೆಯ ನಿಬಂಧನೆಗಳು ಮತ್ತು ಷರತ್ತುಗಳು
14ಎಫ್. ಖಾಲಿ ಸ್ಥಾನಗಳು
14ಜಿ. ಪದದಿಂದ ತೆಗೆದುಹಾಕುವುದು ಮತ್ತು ರಾಜೀನಾಮೆ
14ಹೆಚ್. ಅಪೀಲು ನ್ಯಾಯಾಧಿಕರಣದ ಸಿಬ್ಬಂದಿ
14ಐ. ನ್ಯಾಯಪೀಠಗಳಿಗೆ ಕೆಲಸದ ಹಂಚಿಕೆ
14ಜೆ. ಪ್ರಕರಣಗಳನ್ನು ವರ್ಗಾಯಿಸುವುದಕ್ಕೆ ಅಧ್ಯಕ್ಷನ ಅಧಿಕಾರ

14ಕೆ. ಬಹುಮತದ ಮೂಲಕ ತೀರ್ಮಾನ
14ಎಲ್. ಸದಸ್ಯರು, ಇತರರು, ಲೋಕ ನೌಕರರಾಗಿರುವುದು
14ಎಂ. ಇತ್ಯರ್ಥದಲ್ಲಿರುವ ಪ್ರಕರಣಗಳ ವರ್ಗಾವಣೆ
14ಎನ್. ಅಪೀಲುಗಳ ವರ್ಗಾವಣೆ
15. ಸಿವಿಲ್ ನ್ಯಾಯಾಲಯಕ್ಕೆ ಅಧಿಕಾರ ವ್ಯಾಪ್ತಿ ಇಲ್ಲ
16. ಅಪೀಲು ನ್ಯಾಯಾಧಿಕರಣದ ಪ್ರಕ್ರಿಯೆ ಮತ್ತು ಅಧಿಕಾರಗಳು
17. ಕಾನೂನು ಸಮ್ಮತ ಪ್ರಾತಿನಿಧ್ಯಕ್ಕೆ ಹಕ್ಕು
18. ಸರ್ವೋಚ್ಚ ನ್ಯಾಯಾಲಯಕ್ಕೆ ಅಪೀಲು
19. ಅಪೀಲು ನ್ಯಾಯಾಧಿಕರಣವು ಮಾಡಿದ ಆದೇಶಗಳು ಡಿಕ್ರಿಯಂತೆ ಜಾರಿಗೊಳಿಸುವಂಥವುಗಳಾಗಿರುತ್ತವೆ
20. ಅಪೀಲು ನ್ಯಾಯಾಧಿಕರಣದ ಆದೇಶಗಳನ್ನು ಪಾಲಿಸಲು ಉದ್ದೇಶಪೂರ್ವಕ ವಿಫಲತೆಗೆ ದಂಡನೆ

## ಅಧ್ಯಾಯ –V
## ಹಣಕಾಸು, ಲೆಕ್ಕಪತ್ರಗಳು ಮತ್ತು ಲೆಕ್ಕ ಪರಿಶೋಧನೆ

21. ಕೇಂದ್ರ ಸರ್ಕಾರದಿಂದ ಅನುದಾನಗಳು
22. ನಿಧಿ
23. ಲೆಕ್ಕಪತ್ರಗಳು ಮತ್ತು ಲೆಕ್ಕ ಪರಿಶೋಧನೆ
24. ಕೇಂದ್ರ ಸರ್ಕಾರಕ್ಕೆ ವಿವರ ಪಟ್ಟಿಕೆಗಳು, ಇತ್ಯಾದಿಗಳನ್ನು ಒದಗಿಸುವುದು

## ಅಧ್ಯಾಯ –VI
## ಸಂಕೀರ್ಣ

25. ನಿರ್ದೇಶನಗಳನ್ನು ನೀಡಲು ಕೇಂದ್ರ ಸರ್ಕಾರದ ಅಧಿಕಾರ
26. ಪ್ರಾಧಿಕಾರದ ಸದಸ್ಯರು, ಅಧಿಕಾರಿಗಳು ಮತ್ತು ನೌಕರರು ಲೋಕ ನೌಕರರಾಗಿರುವುದು
27. ಅಧಿಕಾರ ವ್ಯಾಪ್ತಿಗೆ ಪ್ರತಿಷೇಧ
28. ಸದ್ಭಾವನೆಯಿಂದ ಕೈಗೊಂಡ ಕ್ರಮದ ಸಂರಕ್ಷಣೆ
29. ಪ್ರಾಧಿಕಾರದ ನಿರ್ದೇಶನಗಳ ಉಲ್ಲಂಘನೆಗೆ ದಂಡ
30. ಕಂಪನಿಗಳಿಂದ ಅಪರಾಧಗಳು
31. ಸರ್ಕಾರದ ಇಲಾಖೆಗಳಿಂದ ಅಪರಾಧಗಳು
32. ಸಂಪತ್ತು ಮತ್ತು ಆದಾಯದ ಮೇಲಿನ ತೆರಿಗೆಯಿಂದ ವಿನಾಯಿತಿ
33. ಪ್ರತ್ಯಾಯೋಜನೆ
34. ಅಪರಾಧಗಳ ಸಂಜ್ಞೇಯತೆ
35. ನಿಯಮಗಳನ್ನು ರಚಿಸಲು ಅಧಿಕಾರ
36. ವಿನಿಯಮನಗಳನ್ನು ರಚಿಸಲು ಅಧಿಕಾರ
37. ಸಂಸತ್ತಿನ ಮುಂದೆ ನಿಯಮಗಳನ್ನು ಮತ್ತು ವಿನಿಯಮನಗಳನ್ನು ಇರಿಸುವುದು
38. ಕೆಲವು ಕಾನೂನುಗಳ ಅನ್ವಯ
39. ತೊಂದರೆಗಳನ್ನು ನಿವಾರಿಸಲು ಅಧಿಕಾರ
40. ನಿರಸನ ಮತ್ತು ಉಳಿಸುವಿಕೆ

# ಭಾರತ ದೂರ ಸಂಪರ್ಕ ವಿನಿಯಾಮಕ ಪ್ರಾಧಿಕಾರ ಅಧಿನಿಯಮ, 1997

**(1997ರ ಅಧಿನಿಯಮ ಸಂಖ್ಯೆ 24)**

[ಮಾರ್ಚ್ 28, 1997]

ದೂರಸಂಪರ್ಕ ಸೇವೆಗಳನ್ನು ವಿನಿಯಮಿಸಲು, ವಿವಾದಗಳ ನ್ಯಾಯ ನಿರ್ಣಯ ಮಾಡಲು, ಅಪೀಲುಗಳನ್ನು ವಿಲೆ ಮಾಡಲು ಹಾಗೂ ದೂರಸಂಪರ್ಕ ವಲಯದ ಸೇವೆ ಒದಗಿಸುವವರ ಮತ್ತು ಬಳಕೆದಾರರ ಹಿತಾಸಕ್ತಿಯನ್ನು ರಕ್ಷಿಸಲು, ದೂರಸಂಪರ್ಕ ವಲಯದ ವ್ಯವಸ್ಥಿತ ಬೆಳವಣಿಗೆಯನ್ನು ಉತ್ತೇಜಿಸಲು ಮತ್ತು ಸುನಿಶ್ಚಿತಪಡಿಸಲು ಭಾರತ ದೂರಸಂಪರ್ಕ ವಿನಿಯಾಮಕ ಪ್ರಾಧಿಕಾರವನ್ನು ಹಾಗೂ ದೂರಸಂಪರ್ಕ ವಿವಾದಗಳ ಇತ್ಯರ್ಥ ಮತ್ತು ಅಪೀಲು ನ್ಯಾಯಾಧಿಕರಣವನ್ನು ಸ್ಥಾಪಿಸುವುದಕ್ಕಾಗಿ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗಾಗಿ ಉಪಬಂಧ ಕಲ್ಪಿಸುವ ಅಧಿನಿಯಮ.

ಭಾರತ ಗಣರಾಜ್ಯದ ನಲವತ್ತೆಂಟನೇ ವರ್ಷದಲ್ಲಿ ಸಂಸತ್ತಿನಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:–

## ಅಧ್ಯಾಯ –I
## ಪ್ರಾರಂಭಿಕ

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಭಾರತ ದೂರಸಂಪರ್ಕ ವಿನಿಯಾಮಕ ಪ್ರಾಧಿಕಾರ ಅಧಿನಿಯಮ, 1997 ಎಂದು ಕರೆಯತಕ್ಕದ್ದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗತಕ್ಕದ್ದು.

(3) ಇದು, 1997ರ ಜನವರಿ 25 ರಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

**2. ಪರಿಭಾಷೆಗಳು.–** (1) ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಗೊತ್ತುಪಡಿಸಲಾದ ದಿನ" ಎಂದರೆ 3ನೇ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ ಪ್ರಾಧಿಕಾರವು ಸ್ಥಾಪಿತವಾದ ದಿನಾಂಕ ಎಂದು ಅರ್ಥ;

(ಎಎ) "ಅಪೀಲು ನ್ಯಾಯಾಧಿಕರಣ" ಎಂದರೆ 14ನೇ ಪ್ರಕರಣದ ಮೇರೆಗೆ ಸ್ಥಾಪಿತವಾದ ದೂರ ಸಂಪರ್ಕ ವಿವಾದಗಳ ಇತ್ಯರ್ಥ ಮತ್ತು ಅಪೀಲು ನ್ಯಾಯಾಧಿಕರಣ ಎಂದು ಅರ್ಥ;

(ಬಿ) "ಪ್ರಾಧಿಕಾರ" ಎಂದರೆ 3ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಸ್ಥಾಪಿತವಾದ ಭಾರತ ದೂರಸಂಪರ್ಕ ವಿನಿಯಾಮಕ ಪ್ರಾಧಿಕಾರ ಎಂದು ಅರ್ಥ;

(ಸಿ) "ಅಧ್ಯಕ್ಷ" ಎಂದರೆ 3ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ನೇಮಕಗೊಂಡ ಪ್ರಾಧಿಕಾರದ ಅಧ್ಯಕ್ಷ ಎಂದು ಅರ್ಥ;

(ಡಿ) "ನಿಧಿ" ಎಂದರೆ 22ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಸ್ಥಾಪಿತವಾದ ನಿಧಿ ಎಂದು ಅರ್ಥ;

(ಇ) "ಲೈಸೆನ್ಸು ಪಡೆದವನು" ಎಂದರೆ ನಿರ್ದಿಷ್ಟಪಡಿಸಿದ ಸಾರ್ವಜನಿಕ ದೂರಸಂಪರ್ಕ ಸೇವೆಗಳನ್ನು ಒದಗಿಸುವುದಕ್ಕಾಗಿ ಭಾರತ ಟೆಲಿಗ್ರಾಫ್ ಅಧಿನಿಯಮ, 1885ರ (1985ರ 13) 4ನೇ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ ಲೈಸೆನ್ಸು ಹೊಂದಿರುವ ಯಾರೇ ವ್ಯಕ್ತಿ ಎಂದು ಅರ್ಥ;

(ಇಎ) "ಲೈಸೆನ್ಸು ನೀಡುವವನು" ಎಂದರೆ ಭಾರತ ಟೆಲಿಗ್ರಾಫ್ ಅಧಿನಿಯಮ, 1885ರ (1885ರ 13) 4ನೇ ಪ್ರಕರಣದ ಮೇರೆಗೆ ಲೈಸೆನ್ಸು ಮಂಜೂರು ಮಾಡುವ ಕೇಂದ್ರ ಸರ್ಕಾರ ಅಥವಾ ಟೆಲಿಗ್ರಾಫ್ ಪ್ರಾಧಿಕಾರ ಎಂದು ಅರ್ಥ;

(ಎಫ್) "ಸದಸ್ಯ" ಎಂದರೆ 3ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ನೇಮಕಗೊಂಡ ಪ್ರಾಧಿಕಾರದ ಸದಸ್ಯ ಎಂದು ಅರ್ಥ ಮತ್ತು ಇದರಲ್ಲಿ ಅಧ್ಯಕ್ಷನೂ ಮತ್ತು ಉಪಾಧ್ಯಕ್ಷನೂ ಒಳಗೊಳ್ಳುತ್ತಾರೆ;

(ಜಿ) "ಅಧಿಸೂಚನೆ" ಎಂದರೆ ರಾಜಪತ್ರದಲ್ಲಿ ಪ್ರಕಟಿಸಿದ ಅಧಿಸೂಚನೆ ಎಂದು ಅರ್ಥ;

(ಹೆಚ್) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು ಎಂದು ಅರ್ಥ;

(ಐ) "ವಿನಿಯಮನಗಳು" ಎಂದರೆ ಈ ಅಧಿನಿಯಮದ ಮೇರೆಗೆ ಪ್ರಾಧಿಕಾರವು ರಚಿಸಿದ ವಿನಿಯಮನಗಳು ಎಂದು ಅರ್ಥ;

(ಜೆ) "ಸೇವೆ ಒದಗಿಸುವವನು" ಎಂದರೆ ಸೇವೆ ಒದಗಿಸುವ ಸರ್ಕಾರ ಮತ್ತು ಅದು ಲೈಸೆನ್ಸು ಪಡೆದವನನ್ನು ಒಳಗೊಳ್ಳುತ್ತದೆ;

(ಕೆ) "ದೂರಸಂಪರ್ಕ ಸೇವೆ" ಎಂದರೆ (ಇಲೆಕ್ಟ್ರಾನಿಕ್ ಮೇಲ್, ವಾಯಿಸ್ ಮೇಲ್, ಡಾಟಾ ಸೇವೆಗಳು, ಆಡಿಯೋ ಟೆಕ್ಸ್ ಸೇವೆಗಳು, ವಿಡಿಯೋ ಟೆಕ್ಸ್ ಸೇವೆಗಳು, ರೇಡಿಯೋ ಪೇಜಿಂಗ್ ಮತ್ತು ಸೆಲ್ಯೂಲರ್ ಮೊಬೈಲ್ ಟೆಲಿಫೋನ್ ಸೇವೆಗಳೂ ಸೇರಿದಂತೆ) ಚಿಹ್ನೆಗಳನ್ನು, ಸಂಕೇತಗಳನ್ನು, ಬರಹವನ್ನು, ಬಿಂಬಗಳನ್ನು ಮತ್ತು ಧ್ವನಿಗಳನ್ನು ಅಥವಾ ಯಾವುದೇ ಸ್ವರೂಪದ ವಾರ್ತೆಯನ್ನು, ತಂತಿಯ, ರೇಡಿಯೋ, ದೃಶ್ಯ ಅಥವಾ ಇತರ ವಿದ್ಯುತ್ಕಾಂತೀಯ ಮಾಧ್ಯಮಗಳ ಮೂಲಕ ಪ್ರಸಾರ ಮಾಡುವ ಅಥವಾ ಅವುಗಳನ್ನು ಸ್ವೀಕರಿಸುವ ಮೂಲಕ ಒದಗಿಸುವ ಯಾವುದೇ ವರ್ಣನೆಯ ಸೇವೆ ಎಂದು ಅರ್ಥ, ಆದರೆ ಅದು ಪ್ರಸಾರ ಸೇವೆಗಳನ್ನು ಒಳಗೊಳ್ಳತಕ್ಕದ್ದಲ್ಲ:

ಪರಂತು, ಕೇಂದ್ರ ಸರ್ಕಾರವು ಪ್ರಸಾರ ಸೇವೆಗಳನ್ನೂ ಒಳಗೊಂಡಂತೆ ಇತರ ಯಾವುದೇ ಸೇವೆಯನ್ನು ದೂರಸಂಪರ್ಕ ಸೇವೆಯೆಂದು ಅಧಿಸೂಚಿಸಬಹುದು.

(2) ಈ ಅಧಿನಿಯಮದಲ್ಲಿ ಬಳಸಿದ ಮತ್ತು ಪರಿಭಾಷಿಸಿರದ, ಆದರೆ ಭಾರತ ಟೆಲಿಗ್ರಾಫ್ ಅಧಿನಿಯಮ, 1885ರಲ್ಲಿ (1885ರ 13) ಅಥವಾ ಭಾರತ ವೈರ್‌ಲೆಸ್ ಟೆಲಿಗ್ರಾಫಿ ಅಧಿನಿಯಮ, 1933 ರಲ್ಲಿ (1933ರ 17) ಪರಿಭಾಷಿಸಿದ ಪದಗಳು ಮತ್ತು ಅಭಿವ್ಯಕ್ತಿಗಳು ಆ ಅಧಿನಿಯಮಗಳಲ್ಲಿ ಅವುಗಳಿಗೆ ಅನುಕ್ರಮವಾಗಿ ಕೊಟ್ಟಿರುವ ಅರ್ಥಗಳನ್ನೇ ಹೊಂದಿರತಕ್ಕದ್ದು.

(3) ಜಮ್ಮು ಮತ್ತು ಕಾಶ್ಮೀರ ರಾಜ್ಯದಲ್ಲಿ ಜಾರಿಯಲ್ಲಿ ಇಲ್ಲದಿರುವ ಕಾನೂನಿಗೆ ಈ ಅಧಿನಿಯಮದಲ್ಲಿ ಮಾಡಿರುವ ಯಾವುದೇ ಉಲ್ಲೇಖವನ್ನು ಆ ರಾಜ್ಯಕ್ಕೆ ಸಂಬಂಧಿಸಿದಂತೆ ಆ ರಾಜ್ಯದಲ್ಲಿರುವ ಸಂವಾದಿ ಕಾನೂನು ಯಾವುದಾದರೂ ಇದ್ದರೆ, ಅದಕ್ಕೆ ಮಾಡಿರುವ ಉಲ್ಲೇಖವೆಂಬುದಾಗಿ ಅರ್ಥೈಸತಕ್ಕದ್ದು.

## ಅಧ್ಯಾಯ-II

### ಭಾರತ ದೂರಸಂಪರ್ಕ ವಿನಿಯಾಮಕ ಪ್ರಾಧಿಕಾರ

**3. ಪ್ರಾಧಿಕಾರದ ಸ್ಥಾಪನೆ ಮತ್ತು ನಿಗಮನ.–** (1) ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರುವಂತೆ, ಈ ಅಧಿನಿಯಮದ ಉದ್ದೇಶಗಳಿಗಾಗಿ ಭಾರತ ದೂರಸಂಪರ್ಕ ವಿನಿಯಾಮಕ ಪ್ರಾಧಿಕಾರ ಎಂದು ಕರೆಯಲಾಗುವ ಒಂದು ಪ್ರಾಧಿಕಾರವನ್ನು ಸ್ಥಾಪಿಸತಕ್ಕದ್ದು.

(2) ಪ್ರಾಧಿಕಾರವು ಮೇಲೆ ಹೇಳಿದ ಹೆಸರಿನ, ಶಾಶ್ವತ ಉತ್ತರಾಧಿಕಾರವನ್ನು ಹಾಗೂ ಸಾಮಾನ್ಯ ಮೊಹರನ್ನು ಹೊಂದಿರುವ ಒಂದು ನಿಗಮಿತ ನಿಕಾಯವಾಗಿರತಕ್ಕದ್ದು ಮತ್ತು ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು ಚರ ಮತ್ತು ಸ್ಥಿರ ಸ್ವತ್ತುಗಳೆರಡನ್ನೂ ಆರ್ಜಿಸಲು, ಹೊಂದಲು ಮತ್ತು ವಿಲೆ ಮಾಡಲು ಹಾಗೂ ಕರಾರು ಮಾಡಿಕೊಳ್ಳಲು ಅಧಿಕಾರ ಹೊಂದಿರತಕ್ಕದ್ದು, ಮತ್ತು ಸದರಿ ಹೆಸರಿನಲ್ಲಿ ದಾವೆಯನ್ನು ಹೂಡತಕ್ಕದ್ದು ಅಥವಾ ದಾವೆಗೆ ಗುರಿಯಾಗತಕ್ಕದ್ದು.

(3) ಪ್ರಾಧಿಕಾರವು, ಕೇಂದ್ರ ಸರ್ಕಾರವು ನೇಮಕ ಮಾಡುವ ಒಬ್ಬ ಅಧ್ಯಕ್ಷನನ್ನು, ಮತ್ತು ಇಬ್ಬರಿಗಿಂತ ಹೆಚ್ಚಿಲ್ಲದ ಪೂರ್ಣಕಾಲಿಕ ಸದಸ್ಯರನ್ನು ಮತ್ತು ಇಬ್ಬರಿಗಿಂತ ಹೆಚ್ಚಿಲ್ಲದ ಅರೆಕಾಲಿಕ ಸದಸ್ಯರನ್ನು ಒಳಗೊಂಡಿರತಕ್ಕದ್ದು.

(4) ಪ್ರಾಧಿಕಾರದ ಪ್ರಧಾನ ಕಚೇರಿಯು ನವದೆಹಲಿಯಲ್ಲಿರತಕ್ಕದ್ದು.

**4. ಅಧ್ಯಕ್ಷ ಮತ್ತು ಇತರ ಸದಸ್ಯರ ನೇಮಕಕ್ಕೆ ಇರಬೇಕಾದ ಅರ್ಹತೆಗಳು.–** ಕೇಂದ್ರ ಸರ್ಕಾರವು, ದೂರ ಸಂಪರ್ಕ, ಕೈಗಾರಿಕೆ, ಹಣಕಾಸು, ಲೆಕ್ಕಶಾಸ್ತ್ರ, ಕಾನೂನು, ಆಡಳಿತ ಅಥವಾ ಬಳಕೆದಾರರಿಗೆ ಸಂಬಂಧಿಸಿದ ವಿಷಯಗಳಲ್ಲಿ ವಿಶೇಷ ಜ್ಞಾನ ಪಡೆದಿರುವ ಮತ್ತು ವೃತ್ತಿ ಅನುಭವವಿರುವ ವ್ಯಕ್ತಿಗಳ ಪೈಕಿಯಿಂದ ಪ್ರಾಧಿಕಾರದ ಅಧ್ಯಕ್ಷನನ್ನು ಮತ್ತು ಇತರ ಸದಸ್ಯರನ್ನು ನೇಮಕ ಮಾಡತಕ್ಕದ್ದು:

ಪರಂತು, ಸರ್ಕಾರಿ ಸೇವೆಯಲ್ಲಿರುವ ಅಥವಾ ಸೇವೆಯಲ್ಲಿದ್ದ ಒಬ್ಬ ವ್ಯಕ್ತಿಯನ್ನು, ಅಂತಹ ವ್ಯಕ್ತಿಯು ಭಾರತ ಸರ್ಕಾರದ ಕಾರ್ಯದರ್ಶಿ ಅಥವಾ ಅಪರ ಕಾರ್ಯದರ್ಶಿ ಹುದ್ದೆಯನ್ನು ಅಥವಾ ಅಪರ ಕಾರ್ಯದರ್ಶಿ ಮತ್ತು ಕಾರ್ಯದರ್ಶಿ ಹುದ್ದೆಯನ್ನು ಅಥವಾ ಕೇಂದ್ರ ಸರ್ಕಾರದಲ್ಲಿ ಅಥವಾ ರಾಜ್ಯ ಸರ್ಕಾರದಲ್ಲಿ ಯಾವುದೇ ತತ್ಸಮಾನ ಹುದ್ದೆಯನ್ನು ಮೂರು ವರ್ಷಗಳಿಗಿಂತ ಕಡಿಮೆಯಿಲ್ಲದ ಅವಧಿಗೆ ಹೊಂದಿದ್ದ ಹೊರತು, ಸದಸ್ಯನಾಗಿ ನೇಮಕಮಾಡತಕ್ಕದ್ದಲ್ಲ.

**5. ಅಧ್ಯಕ್ಷ ಮತ್ತು ಇತರ ಸದಸ್ಯರ ಪದಾವಧಿ, ಸೇವಾ ಷರತ್ತುಗಳು, ಇತ್ಯಾದಿ.–** (1) ಕೇಂದ್ರ ಸರ್ಕಾರವು, ಯಾರೇ ವ್ಯಕ್ತಿಯನ್ನು ಅಧ್ಯಕ್ಷನೆಂದು ಅಥವಾ ಸದಸ್ಯನೆಂದು ನೇಮಕ ಮಾಡುವುದಕ್ಕೆ ಮುಂಚೆ, ಅಂಥ ವ್ಯಕ್ತಿಯು ಅಂತಹ ಸದಸ್ಯನಾಗಿ ತನ್ನ ಪ್ರಕಾರ್ಯಗಳಿಗೆ ಪ್ರತಿಕೂಲ ಪರಿಣಾಮ ಉಂಟುಮಾಡುವ ಸಂಭವವಿರುವ ಯಾವುದೇ ಅಂತಹ ಹಣಕಾಸಿನ ಅಥವಾ ಇತರ ಹಿತಾಸಕ್ತಿಯನ್ನು ಹೊಂದಿಲ್ಲವೆಂಬುದನ್ನು ಸ್ವತಃ ಮನದಟ್ಟು ಮಾಡಿಕೊಳ್ಳತಕ್ಕದ್ದು.

(2) ಅಧ್ಯಕ್ಷ ಮತ್ತು ಇತರ ಸದಸ್ಯರು, ಕೇಂದ್ರ ಸರ್ಕಾರವು ಈ ಬಗ್ಗೆ ಅಧಿಸೂಚಿಸಬಹುದಾದಂತೆ, ತಮ್ಮ ಪದವನ್ನು ಧಾರಣ ಮಾಡಿದ ದಿನಾಂಕದಿಂದ ಮೂರು ವರ್ಷಗಳಿಗೆ ಮೀರದ ಅವಧಿಯವರೆಗೆ ಅಥವಾ ಅರವತ್ತೈದು ವರ್ಷ ವಯಸ್ಸನ್ನು ತಲುಪುವವರೆಗೆ ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ, ಪದಧಾರಣ ಮಾಡತಕ್ಕದ್ದು.

(3) ಭಾರತ ದೂರ ಸಂಪರ್ಕ ವಿನಿಯಾಮಕ ಪ್ರಾಧಿಕಾರ (ತಿದ್ದುಪಡಿ) ಅಧಿನಿಯಮ, 2000 ಇದರ ಪ್ರಾರಂಭದ ನಂತರ ಪ್ರಾಧಿಕಾರದ ಅಧ್ಯಕ್ಷನಾಗಿ ನೇಮಕಗೊಂಡಿರುವ ವ್ಯಕ್ತಿಯು ಮತ್ತು ಸದಸ್ಯನಾಗಿ ನೇಮಕಗೊಂಡಿರುವ ಮತ್ತು ಅಂಥ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ಹಾಗೆಂದು ಪದವನ್ನು ಧಾರಣ ಮಾಡಿರುವ ಪ್ರತಿಯೊಬ್ಬ ಇತರ ವ್ಯಕ್ತಿಯು ತಮ್ಮ ತಮ್ಮ ಪದಗಳನ್ನು ತೆರವು ಮಾಡತಕ್ಕದ್ದು ಮತ್ತು ಅಂತಹ ಅಧ್ಯಕ್ಷ ಮತ್ತು ಅಂತಹ ಇತರ ಸದಸ್ಯರು ತಮ್ಮ ತಮ್ಮ ಪದಾವಧಿಯನ್ನು ಅಥವಾ ಸೇವೆಯ ಯಾವುದೇ ಕರಾರನ್ನು ಅವಧಿಗೆ ಮುಂಚೆಯೇ ಕೊನೆಗೊಳಿಸಿದ್ದಕ್ಕಾಗಿ ಮೂರು ತಿಂಗಳಿಗಿಂತ ಹೆಚ್ಚಲ್ಲದ ವೇತನ ಮತ್ತು ಭತ್ಯೆಗಳ ಪರಿಹಾರವನ್ನು ಕ್ಲೇಮು ಮಾಡುವುದಕ್ಕೆ ಹಕ್ಕುಳ್ಳವರಾಗಿರತಕ್ಕದ್ದು.

(4) ಸರ್ಕಾರಿ ನೌಕರನು, ಅಧ್ಯಕ್ಷನಾಗಿ ಅಥವಾ ಪೂರ್ಣಕಾಲಿಕ ಸದಸ್ಯನಾಗಿ ಆಯ್ಕೆಯಾದಾಗ, ಅಧ್ಯಕ್ಷನಾಗಿ ಅಥವಾ ಸಂದರ್ಭಾನುಸಾರ ಪೂರ್ಣಕಾಲಿಕ ಸದಸ್ಯನಾಗಿ ಸೇರುವುದಕ್ಕೆ ಮುಂಚೆ ಸೇವೆಯಿಂದ ನಿವೃತ್ತನಾಗಿರತಕ್ಕದ್ದು.

(5) ಅಧ್ಯಕ್ಷನಿಗೆ ಮತ್ತು ಪೂರ್ಣಕಾಲಿಕ ಸದಸ್ಯರಿಗೆ ಸಂದಾಯ ಮಾಡಬೇಕಾದ ಸಂಬಳ ಮತ್ತು ಭತ್ಯೆಗಳು ಹಾಗೂ ನಿಬಂಧನೆಗಳು ಮತ್ತು ಇತರ ಸೇವಾ ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

(6) ಅಧ್ಯಕ್ಷನ ಅಥವಾ ಸದಸ್ಯನ ಸಂಬಳ, ಭತ್ಯೆಗಳು ಮತ್ತು ಇತರ ಸೇವಾ ಷರತ್ತುಗಳು, ಅವರ ನೇಮಕದ ನಂತರ, ಅವರಿಗೆ ಅನಾನುಕೂಲವಾಗುವಂತೆ ವ್ಯತ್ಯಸ್ತಗೊಳಿಸತಕ್ಕದ್ದಲ್ಲ.

(6ಎ) ಅರೆಕಾಲಿಕ ಸದಸ್ಯರು, ನಿಯಮಿಸಬಹುದಾದಂಥ ಭತ್ಯೆಗಳನ್ನು ಪಡೆಯತಕ್ಕದ್ದು.

(7) (2)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಸದಸ್ಯನು,–

(ಎ) ಕೇಂದ್ರ ಸರ್ಕಾರಕ್ಕೆ ಮೂರು ತಿಂಗಳುಗಳಿಗಿಂತ ಕಡಿಮೆಯಲ್ಲದ ಅವಧಿಯ ಲಿಖಿತ ನೋಟೀಸನ್ನು ನೀಡುವ ಮೂಲಕ ತನ್ನ ಪದವನ್ನು ತ್ಯಜಿಸಬಹುದು; ಅಥವಾ

(ಬಿ) 7ನೇ ಪ್ರಕರಣದ ಉಪಬಂಧಗಳಿಗನುಸಾರ ಅವನನ್ನು ಪದದಿಂದ ತೆಗೆದುಹಾಕಬಹುದು.

(8) ಅಧ್ಯಕ್ಷನು ಅಥವಾ ಯಾರೇ ಪೂರ್ಣಕಾಲಿಕ ಸದಸ್ಯನು ಅಂಥ ಪದವನ್ನು ಧಾರಣ ಮಾಡಿರುವುದು ನಿಂತು ಹೋದ ಸಂದರ್ಭದಲ್ಲಿ,–

(ಎ) ಕೇಂದ್ರ ಸರ್ಕಾರದ ಅಥವಾ ಯಾವುದೇ ರಾಜ್ಯ ಸರ್ಕಾರದ ಅಧೀನದಲ್ಲಿ ಮುಂದಿನ ಉದ್ಯೋಗಕ್ಕೆ ಅನರ್ಹನಾಗಿರತಕ್ಕದ್ದು; ಅಥವಾ

(ಬಿ) ಅವನು ಅಂಥ ಪದವನ್ನು ಹೊಂದಿರುವುದು ನಿಂತು ಹೋದ ದಿನಾಂಕದಿಂದ ಒಂದು ವರ್ಷದ ಅವಧಿಯವರೆಗೆ ಯಾವುದೇ ವಾಣಿಜ್ಯ ಉದ್ಯೋಗವನ್ನು ಅಂಗೀಕರಿಸತಕ್ಕದ್ದಲ್ಲ:

ಪರಂತು, ಈ ಉಪಪ್ರಕರಣದಲ್ಲಿ ಒಳಗೊಂಡಿರುವುದು ಯಾವುದೂ, (3)ನೇ ಉಪಪ್ರಕರಣದ ಮೇರೆಗೆ ಪದವನ್ನು ಹೊಂದಿರುವುದು ನಿಂತುಹೋಗಿರುವ ಅಧ್ಯಕ್ಷನಿಗೆ ಅಥವಾ ಸದಸ್ಯನಿಗೆ ಅನ್ವಯವಾಗತಕ್ಕದ್ದಲ್ಲ ಮತ್ತು ಅಂಥ ಅಧ್ಯಕ್ಷನು ಅಥವಾ ಸದಸ್ಯನು ಪ್ರಾಧಿಕಾರದಲ್ಲಿ ಮರು ನೇಮಕಕ್ಕೆ ಅಥವಾ ಅಪೀಲು ನ್ಯಾಯಾಧಿಕರಣದಲ್ಲಿ ನೇಮಕಕ್ಕೆ ಅರ್ಹನಾಗಿರತಕ್ಕದ್ದು.

(9) ಅಧ್ಯಕ್ಷನ ಅಥವಾ ಇತರ ಯಾರೇ ಸದಸ್ಯನ ಪದವು ತೆರವಾದಾಗ, ಅಂಥ ಪದವು ತೆರವಾದ ದಿನಾಂಕದಿಂದ ಮೂರು ತಿಂಗಳ ಅವಧಿಯೊಳಗೆ ಅದನ್ನು ಭರ್ತಿ ಮಾಡತಕ್ಕದ್ದು.

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ, "ವಾಣಿಜ್ಯ ಉದ್ಯೋಗ" ಎಂದರೆ ಯಾವುದೇ ಕ್ಷೇತ್ರದಲ್ಲಿ ವ್ಯಾಪಾರ, ವಾಣಿಜ್ಯ, ಕೈಗಾರಿಕೆ ಅಥವಾ ಹಣಕಾಸಿನ ವ್ಯವಹಾರದಲ್ಲಿ ತೊಡಗಿರುವ ವ್ಯಕ್ತಿಯ ಅಧೀನದಲ್ಲಿ ಅಥವಾ ಏಜನ್ಸಿಯಲ್ಲಿ ಯಾವುದೇ ಸ್ಥಾನದಲ್ಲಿನ ಉದ್ಯೋಗ ಎಂದು ಅರ್ಥ ಮತ್ತು ಅದು ಕಂಪನಿಯ ನಿರ್ದೇಶಕನನ್ನು ಅಥವಾ ಫರ್ಮಿನ ಪಾಲುದಾರನನ್ನು ಸಹ ಒಳಗೊಳ್ಳುತ್ತದೆ ಹಾಗೂ ಇದು ಸ್ವತಂತ್ರವಾಗಿಯಾಗಲಿ ಅಥವಾ ಫರ್ಮಿನ ಪಾಲುದಾರನಾಗಿಯಾಗಲಿ ಅಥವಾ ಸಲಹೆಗಾರನಾಗಿಯಾಗಲಿ ಅಥವಾ ಸಮಾಲೋಚಕನಾಗಿಯಾಗಲಿ, ವೃತ್ತಿಯಲ್ಲಿ ತೊಡಗಿರುವುದನ್ನು ಸಹ ಒಳಗೊಳ್ಳುತ್ತದೆ.

**6. ಅಧ್ಯಕ್ಷನ ಮತ್ತು ಉಪಾಧ್ಯಕ್ಷನ ಅಧಿಕಾರಗಳು.–** (1) ಅಧ್ಯಕ್ಷನು ಪ್ರಾಧಿಕಾರದ ವ್ಯವಹಾರಗಳ ನಿರ್ವಹಣೆಯಲ್ಲಿ ಸಾಮಾನ್ಯ ಅಧೀಕ್ಷಣೆಯ ಮತ್ತು ನಿರ್ದೇಶನಗಳ ಅಧಿಕಾರಗಳನ್ನು ಹೊಂದಿರತಕ್ಕದ್ದು ಮತ್ತು ಅವನು ಪ್ರಾಧಿಕಾರದ ಸಭೆಗಳ ಅಧ್ಯಕ್ಷತೆಯನ್ನು ವಹಿಸುವುದರ ಜೊತೆಗೆ, ಪ್ರಾಧಿಕಾರದ ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು ಚಲಾಯಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು ಮತ್ತು ನಿಯಮಿಸಬಹುದಾದಂಥ ಇತರ ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

(2) ಕೇಂದ್ರ ಸರ್ಕಾರವು, ಸದಸ್ಯರ ಪೈಕಿ ಒಬ್ಬನನ್ನು ಪ್ರಾಧಿಕಾರದ ಉಪಾಧ್ಯಕ್ಷನನ್ನಾಗಿ ನೇಮಕ ಮಾಡಬಹುದು, ಆತನು ಪ್ರಾಧಿಕಾರವು ನಿಯಮಿಸಬಹುದಾದಂತೆ ಅಥವಾ ಅವನಿಗೆ ವಹಿಸಿಕೊಡಬಹುದಾದಂತೆ ಅಧ್ಯಕ್ಷನ ಅಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

**7. ಕೆಲವು ಸಂದರ್ಭಗಳಲ್ಲಿ ಸದಸ್ಯನನ್ನು ಪದದಿಂದ ತೆಗೆದುಹಾಕುವುದು ಮತ್ತು ಅಮಾನತುಗೊಳಿಸುವುದು.–** (1) ಕೇಂದ್ರ ಸರ್ಕಾರವು, ಯಾರೇ ಸದಸ್ಯನನ್ನು,–

(ಎ) ಅವನು ದಿವಾಳಿಯೆಂದು ನ್ಯಾಯ ನಿರ್ಣೀತನಾಗಿದ್ದರೆ; ಅಥವಾ

(ಬಿ) ಅವನು ಕೇಂದ್ರ ಸರ್ಕಾರದ ಅಭಿಪ್ರಾಯದಲ್ಲಿ, ನೈತಿಕ ಅಧಃಪತನವನ್ನು ಒಳಗೊಂಡ ಒಂದು ಅಪರಾಧದ ಅಪರಾಧಿಯೆಂದು ನಿರ್ಣೀತನಾಗಿದ್ದರೆ; ಅಥವಾ

(ಸಿ) ಸದಸ್ಯನಾಗಿ ಕಾರ್ಯನಿರ್ವಹಿಸಲು ದೈಹಿಕವಾಗಿ ಅಥವಾ ಮಾನಸಿಕವಾಗಿ ಅವನು ಅಸಮರ್ಥನಾಗಿದ್ದರೆ; ಅಥವಾ

(ಡಿ) ಸದಸ್ಯನಾಗಿ ಅವನ ಪ್ರಕಾರ್ಯಗಳಿಗೆ ಪ್ರತಿಕೂಲ ಪರಿಣಾಮವನ್ನುಂಟು ಮಾಡುವ ಸಂಭವವಿರುವಂತಹ ಹಣಕಾಸಿನ ಅಥವಾ ಇತರ ಹಿತಾಸಕ್ತಿಯನ್ನು ಅವನು ಹೊಂದಿದ್ದರೆ; ಅಥವಾ

(ಇ) ಅವನು ಪದದಲ್ಲಿ ಮುಂದುವರಿಯುವುದರಿಂದ ಸಾರ್ವಜನಿಕ ಹಿತಾಸಕ್ತಿಗೆ ಬಾಧಕವಾಗುವಂತೆ ಆತನು ತನ್ನ ಸ್ಥಾನವನ್ನು ದುರುಪಯೋಗಪಡಿಸಿಕೊಂಡಿದ್ದರೆ

– ಪದದಿಂದ ತೆಗೆದುಹಾಕಬಹುದು.

(2) ಅಂಥ ಯಾರೇ ಸದಸ್ಯನನ್ನು, ಆ ವಿಷಯದಲ್ಲಿ ತನ್ನ ಅಹವಾಲನ್ನು ಹೇಳಿಕೊಳ್ಳಲು ಒಂದು ಸೂಕ್ತ ಅವಕಾಶವನ್ನು ಅವನಿಗೆ ನೀಡಿದ ಹೊರತು (1)ನೇ ಉಪಪ್ರಕರಣದ (ಡಿ) ಖಂಡದ ಅಥವಾ (ಇ) ಖಂಡದ ಮೇರೆಗೆ ಪದದಿಂದ ತೆಗೆದುಹಾಕತಕ್ಕದ್ದಲ್ಲ.

**8. ಸಭೆಗಳು.–** (1) ಪ್ರಾಧಿಕಾರವು, ವಿನಿಯಮನಗಳ ಮೂಲಕ ಉಪಬಂಧಿಸಬಹುದಾದಂತೆ, ಅಂಥ ಸಮಯಗಳಲ್ಲಿ ಮತ್ತು ಸ್ಥಳಗಳಲ್ಲಿ ಸಭೆ ಸೇರತಕ್ಕದ್ದು ಮತ್ತು ಅದರ ಸಭೆಗಳಲ್ಲಿ (ಅಂಥ ಸಭೆಗಳಲ್ಲಿ ಕೋರಂನ್ನು

ಒಳಗೊಂಡಂತೆ) ಕಾರ್ಯಕಲಾಪವನ್ನು ನಡೆಸುವುದಕ್ಕೆ ಸಂಬಂಧಿಸಿದಂತೆ ಅಂಥ ಕಾರ್ಯವಿಧಾನದ ನಿಯಮಗಳನ್ನು ಪಾಲಿಸತಕ್ಕದ್ದು.

(2) ಅಧ್ಯಕ್ಷನು ಅಥವಾ ಯಾವುದೇ ಕಾರಣಕ್ಕಾಗಿ, ಪ್ರಾಧಿಕಾರದ ಸಭೆಗೆ ಅವನು ಹಾಜರಾಗಲು ಸಾಧ್ಯವಾಗದಿದ್ದಾಗ ಉಪಾಧ್ಯಕ್ಷನು ಮತ್ತು ಅವನ ಗೈರುಹಾಜರಿಯಲ್ಲಿ ಹಾಜರಿರುವ ಸದಸ್ಯರು ತಮ್ಮ ಪೈಕಿ ಆಯ್ಕೆ ಮಾಡಿದ ಇತರ ಯಾರೇ ಸದಸ್ಯನು ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

(3) ಪ್ರಾಧಿಕಾರದ ಯಾವುದೇ ಸಭೆಯ ಮುಂದೆ ಬರುವ ಎಲ್ಲಾ ಪ್ರಶ್ನೆಗಳನ್ನು ಹಾಜರಿದ್ದು ಮತ ನೀಡುವ ಸದಸ್ಯರ ಬಹುಮತದ ಮೂಲಕ ನಿರ್ಣಯಿಸತಕ್ಕದ್ದು ಮತ್ತು ಮತಗಳು ಸಮಾನವಾಗಿ ಬಂದಿರುವ ಸಂದರ್ಭದಲ್ಲಿ, ಅಧ್ಯಕ್ಷನು ಅಥವಾ ಅವನ ಗೈರು ಹಾಜರಿಯಲ್ಲಿ, ಅಧ್ಯಕ್ಷತೆಯನ್ನು ವಹಿಸಿದ ವ್ಯಕ್ತಿಯು, ಎರಡನೇ ಅಥವಾ ನಿರ್ಣಾಯಕ ಮತವನ್ನು ಹೊಂದಿರತಕ್ಕದ್ದು.

(4) ಪ್ರಾಧಿಕಾರವು, ತನ್ನ ಸಭೆಗಳಲ್ಲಿ ಕಾರ್ಯಕಲಾಪವನ್ನು ನಡೆಸುವುದಕ್ಕಾಗಿ ವಿನಿಯಮನಗಳನ್ನು ರಚಿಸಬಹುದು.

**9. ಖಾಲಿಸ್ಥಾನಗಳು, ಇತ್ಯಾದಿಗಳು, ಪ್ರಾಧಿಕಾರದ ವ್ಯವಹರಣೆಗಳನ್ನು ಅಸಿಂಧುಗೊಳಿಸತಕ್ಕದ್ದಲ್ಲ.–** ಪ್ರಾಧಿಕಾರದ ಯಾವುದೇ ಕೃತ್ಯ ಅಥವಾ ವ್ಯವಹರಣೆಯು,–

(ಎ) ಪ್ರಾಧಿಕಾರದಲ್ಲಿನ ಯಾವುದೇ ಖಾಲಿಸ್ಥಾನ, ಅಥವಾ ಅದರ ರಚನೆಯಲ್ಲಿ ಯಾವುದೇ ನ್ಯೂನತೆ ಇರುವ; ಅಥವಾ

(ಬಿ) ಪ್ರಾಧಿಕಾರದ ಸದಸ್ಯನಾಗಿ ಕಾರ್ಯನಿರ್ವಹಿಸುವ ವ್ಯಕ್ತಿಯ ನೇಮಕದಲ್ಲಿ ಯಾವುದೇ ನ್ಯೂನತೆ ಇರುವ; ಅಥವಾ

(ಸಿ) ಪ್ರಾಧಿಕಾರದ ಕಾರ್ಯವಿಧಾನದಲ್ಲಿ ಪ್ರಕರಣದ ಗುಣಾವಗುಣಗಳಿಗೆ ಬಾಧಕ ಉಂಟುಮಾಡದ ಯಾವುದೇ ಅಕ್ರಮವಿರುವ

– ಕಾರಣಮಾತ್ರದಿಂದಲೇ ಅಸಿಂಧುವಾಗತಕ್ಕದ್ದಲ್ಲ.

**10. ಪ್ರಾಧಿಕಾರದ ಅಧಿಕಾರಿಗಳು ಮತ್ತು ಇತರ ನೌಕರರು.–** (1) ಪ್ರಾಧಿಕಾರವು, ಈ ಅಧಿನಿಯಮದ ಮೇರೆಗೆ ತನ್ನ ಪ್ರಕಾರ್ಯಗಳ ಸಮರ್ಥ ನಿರ್ವಹಣೆಗಾಗಿ ತಾನು ಅಗತ್ಯವೆಂದು ಭಾವಿಸುವ ಅಧಿಕಾರಿಗಳನ್ನು ಮತ್ತು ಅಂಥ ಇತರ ನೌಕರರನ್ನು ನೇಮಕ ಮಾಡಿಕೊಳ್ಳಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ನೇಮಕಗೊಂಡ ಪ್ರಾಧಿಕಾರದ ಅಧಿಕಾರಿಗಳಿಗೆ ಮತ್ತು ಇತರ ನೌಕರರಿಗೆ ಸಂದಾಯವಾಗಬೇಕಾದ ಸಂಬಳ ಮತ್ತು ಭತ್ಯೆಗಳು ಮತ್ತು ಇತರ ಸೇವಾ ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕದ್ದು:

ಪರಂತು, ಪ್ರಾಧಿಕಾರದ ಅಧಿಕಾರಿಗಳಿಗೆ ಮತ್ತು ಇತರ ನೌಕರರಿಗೆ ಸಂದಾಯವಾಗಬೇಕಾದ ಸಂಬಳ ಮತ್ತು ಭತ್ಯೆಗಳಿಗೆ ಮತ್ತು ಇತರ ಸೇವಾ ಷರತ್ತುಗಳಿಗೆ ಸಂಬಂಧಿಸಿದಂತೆ, ಭಾರತ ದೂರ ಸಂಪರ್ಕ ವಿನಿಯಾಮಕ ಪ್ರಾಧಿಕಾರ (ತಿದ್ದುಪಡಿ) ಅಧಿನಿಯಮ, 2000ದ ಪ್ರಾರಂಭಕ್ಕೆ ಮುಂಚೆ ರಚಿಸಿದ್ದ ಯಾವುದೇ ವಿನಿಯಮನವು, 35ನೇ ಪ್ರಕರಣದ (2)ನೇ ಉಪಪ್ರಕರಣದ (ಸಿಎ) ಖಂಡದ ಮೇರೆಗೆ ರಚಿಸಿದ ನಿಯಮಗಳನ್ನು ಅಧಿಸೂಚಿಸಿದ ಕೂಡಲೇ ಜಾರಿಯಲ್ಲಿರುವುದು ನಿಂತುಹೋಗತಕ್ಕದ್ದು.

## ಅಧ್ಯಾಯ –III

## ಪ್ರಾಧಿಕಾರದ ಅಧಿಕಾರಗಳು ಮತ್ತು ಪ್ರಕಾರ್ಯಗಳು

**11. ಪ್ರಾಧಿಕಾರದ ಪ್ರಕಾರ್ಯಗಳು.–** (1) ಭಾರತ ಟೆಲಿಗ್ರಾಫ್ ಅಧಿನಿಯಮ, 1885 (1885ರ 13)ರಲ್ಲಿ ಏನೇ ಒಳಗೊಂಡಿದ್ದರೂ, ಪ್ರಾಧಿಕಾರದ ಪ್ರಕಾರ್ಯಗಳು,–

(ಎ) ಈ ಮುಂದಿನ ವಿಷಯಗಳ ಬಗ್ಗೆ ತಾನಾಗಿಯೇ ಆಗಲಿ ಅಥವಾ ಲೈಸೆನ್ಸ್ ನೀಡುವವನ ಕೋರಿಕೆಯ ಮೇಲಾಗಲಿ ಶಿಫಾರಸ್ಸುಗಳನ್ನು ಮಾಡುವುದು ಆಗಿರತಕ್ಕದ್ದು, ಎಂದರೆ:–

(i) ಹೊಸ ಸೇವೆ ಒದಗಿಸುವವನ ಪ್ರವೇಶದ ಅಗತ್ಯತೆ ಮತ್ತು ಕಾಲ ನಿರ್ಧರಣೆ;

(ii) ಸೇವೆ ಒದಗಿಸುವವನಿಗೆ ಸಂಬಂಧಿಸಿದ ಲೈಸೆನ್ಸ್ ನಿಬಂಧನೆಗಳು ಮತ್ತು ಷರತ್ತುಗಳು;

(iii) ಲೈಸೆನ್ಸಿನ ನಿಬಂಧನೆಗಳನ್ನು ಮತ್ತು ಷರತ್ತುಗಳನ್ನು ಪಾಲಿಸದಿರುವುದಕ್ಕಾಗಿ ಲೈಸೆನ್ಸಿನ ರದ್ದಿಯಾತಿ;

(iv) ದೂರಸಂಪರ್ಕ ಸೇವೆಗಳ ಕಾರ್ಯಾಚರಣೆಯಲ್ಲಿ ಅಂಥ ಸೇವೆಗಳ ಬೆಳವಣಿಗೆಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ಸ್ಪರ್ಧೆಗೆ ಅವಕಾಶ ಕಲ್ಪಿಸಲು ಮತ್ತು ದಕ್ಷತೆಯನ್ನು ವೃದ್ಧಿಪಡಿಸಲು ಕ್ರಮಗಳು;

(v) ಸೇವೆ ಒದಗಿಸುವವರು ಒದಗಿಸುವ ಸೇವೆಗಳಲ್ಲಿನ ತಂತ್ರಜ್ಞಾನಕ್ಕೆ ಸಂಬಂಧಿಸಿದ ಸುಧಾರಣೆಗಳು;

(vi) ಜಾಲದಲ್ಲಿ ಬಳಸಿರುವ ಸಲಕರಣೆಯ ಪರಿಶೀಲನೆಯ ನಂತರ ಸೇವೆ ಒದಗಿಸುವವರು ಬಳಸಬೇಕಾದ ಸಲಕರಣೆಯ ವಿಧ;

(vii) ದೂರಸಂಪರ್ಕ ತಂತ್ರಜ್ಞಾನದ ಅಭಿವೃದ್ಧಿಗೆ ಮತ್ತು ಸಾಮಾನ್ಯವಾಗಿ ದೂರಸಂಪರ್ಕ ಕೈಗಾರಿಕೆಗೆ ಸಂಬಂಧಿಸಿದ ಯಾವುದೇ ಇತರ ವಿಷಯದ ಬಗ್ಗೆ ಕ್ರಮಗಳು;

(viii) ಲಭ್ಯವಿರುವ ವಿವಿಧ ಸೇವೆಗಳ ಸಮರ್ಥ ನಿರ್ವಹಣೆ;

(ಬಿ) ಈ ಮುಂದಿನ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು, ಎಂದರೆ:–

(i) ಲೈಸೆನ್ಸಿನ ನಿಬಂಧನೆಗಳು ಮತ್ತು ಷರತ್ತುಗಳನ್ನು ಪಾಲಿಸುವುದನ್ನು ಖಚಿತಪಡಿಸಿಕೊಳ್ಳುವುದು;

(ii) ಭಾರತ ದೂರಸಂಪರ್ಕ ವಿನಿಯಾಮಕ ಪ್ರಾಧಿಕಾರ (ತಿದ್ದುಪಡಿ) ಅಧಿನಿಯಮ, 2000ದ ಪ್ರಾರಂಭಕ್ಕೆ ಮುಂಚೆ ಮಂಜೂರು ಮಾಡಿದ ಲೈಸೆನ್ಸಿನ ನಿಬಂಧನೆಗಳಲ್ಲಿ ಮತ್ತು ಷರತ್ತುಗಳಲ್ಲಿ ಏನೇ ಒಳಗೊಂಡಿದ್ದರೂ, ಸೇವೆ ಒದಗಿಸುವವರ ನಡುವಿನ ಪರಸ್ಪರ ಸಂಬಂಧದ ನಿಬಂಧನೆಗಳನ್ನು ಮತ್ತು ಷರತ್ತುಗಳನ್ನು ನಿಗದಿಪಡಿಸುವುದು;

(iii) ವಿಭಿನ್ನ ಸೇವೆ ಒದಗಿಸುವವರ ನಡುವೆ ತಾಂತ್ರಿಕ ಅನುರೂಪತೆಯನ್ನು ಮತ್ತು ಪರಿಣಾಮಕಾರಿ ಪರಸ್ಪರ ಸಂಬಂಧವನ್ನು ಖಚಿತಪಡಿಸಿಕೊಳ್ಳುವುದು;

(iv) ಸೇವೆ ಒದಗಿಸುವವರು ದೂರಸಂಪರ್ಕ ಸೇವೆಗಳನ್ನು ಒದಗಿಸುವುದರಿಂದ ಪಡೆದ ಆದಾಯವನ್ನು ತಮ್ಮಲ್ಲೇ ಹಂಚಿಕೊಳ್ಳುವ ವ್ಯವಸ್ಥೆಯನ್ನು ವಿನಿಯಮನಗೊಳಿಸುವುದು;

(v) ಸೇವೆ ಒದಗಿಸುವವರು ನೀಡುವಂಥ ಸೇವೆಯ ಗುಣಮಟ್ಟಗಳನ್ನು ಗೊತ್ತುಪಡಿಸುವುದು ಮತ್ತು ಸೇವಾ ಗುಣಮಟ್ಟವನ್ನು ಖಾತ್ರಿಪಡಿಸುವುದು ಮತ್ತು ದೂರಸಂಪರ್ಕ ಸೇವೆಯ ಬಳಕೆದಾರರ ಹಿತಾಸಕ್ತಿಯನ್ನು ಕಾಪಾಡುವ ಉದ್ದೇಶದಿಂದ ಸೇವೆ ಒದಗಿಸುವವರು ಒದಗಿಸುವಂತಹ ಸೇವೆಯ ನಿಯತಕಾಲಿಕ ಸಮೀಕ್ಷೆಯನ್ನು ನಡೆಸುವುದು;

(vi) ವಿಭಿನ್ನ ಸೇವೆ ಒದಗಿಸುವವರ ಮಧ್ಯೆ ದೂರ ಸಂಪರ್ಕ ಸ್ಥಳೀಯವಾಗಿ ಮತ್ತು ದೂರ ಅಂತರದಲ್ಲಿ ಸರ್ಕ್ಯೂಟ್‌ಗಳನ್ನು ಒದಗಿಸುವುದಕ್ಕಾಗಿ ಕಾಲಾವಧಿಯನ್ನು ಗೊತ್ತುಪಡಿಸುವುದು ಮತ್ತು ಖಚಿತಪಡಿಸಿಕೊಳ್ಳುವುದು;

(vii) ವಿನಿಯಮನಗಳಲ್ಲಿ ಉಪಬಂಧಿಸಿರಬಹುದಾದಂತೆ ಪರಸ್ಪರ ಸಂಬಂಧದ ಒಪ್ಪಂದಗಳ ಮತ್ತು ಅಂಥ ಎಲ್ಲಾ ಇತರ ವಿಷಯಗಳ ರಿಜಿಸ್ಟರನ್ನು ಇಟ್ಟುಕೊಂಡು ಬರುವುದು;

(viii) (vii)ನೇ ಖಂಡದ ಮೇರೆಗೆ ಇಟ್ಟುಕೊಂಡು ಬಂದಿರುವ ರಿಜಿಸ್ಟರನ್ನು, ವಿನಿಯಮನಗಳಲ್ಲಿ, ಉಪಬಂಧಿಸಬಹುದಾದಂಥ ಫೀಜನ್ನು ಸಂದಾಯ ಮಾಡಿದ ಮೇಲೆ ಮತ್ತು ಅಂಥ ಇತರ ಅಗತ್ಯತೆಗಳನ್ನು ಪಾಲಿಸಿದ ಮೇಲೆ ಯಾರೇ ಸಾರ್ವಜನಿಕರಿಗೆ ಪರಿಶೀಲನೆಗಾಗಿ ಮುಕ್ತವಾಗಿರಿಸುವುದು;

(ix) ಸಾರ್ವತ್ರಿಕ ಸೇವಾ ಬಾಧ್ಯತೆಗಳನ್ನು ಸಮರ್ಥವಾಗಿ ಪಾಲಿಸುವುದನ್ನು ಖಚಿತಪಡಿಸುವುದು.

(ಸಿ) ಅಂಥ ಸೇವೆಗಳಿಗೆ ಸಂಬಂಧಿಸಿದಂತೆ ವಿನಿಯಮನಗಳ ಮೂಲಕ ನಿರ್ಧರಿಸಬಹುದಾದಂಥ ದರಗಳಲ್ಲಿ ಫೀಜುಗಳನ್ನು ಮತ್ತು ಇತರ ಶುಲ್ಕಗಳನ್ನು ವಿಧಿಸುವುದು;

(ಡಿ) ಕೇಂದ್ರ ಸರ್ಕಾರವು ಅದಕ್ಕೆ ವಹಿಸಿಕೊಡಬಹುದಾದಂಥ ಅಥವಾ ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸಲು ಅಗತ್ಯವೆನಿಸಬಹುದಾದಂಥ ಆಡಳಿತಾತ್ಮಕ ಮತ್ತು ಹಣಕಾಸಿನ ಪ್ರಕಾರ್ಯಗಳೂ ಒಳಗೊಂಡಂತೆ ಅಂಥ ಇತರ ಪ್ರಕಾರ್ಯಗಳನ್ನು ನೆರವೇರಿಸುವುದು

– ಪ್ರಾಧಿಕಾರದ ಕರ್ತವ್ಯಗಳಾಗಿರತಕ್ಕದ್ದು:

ಪರಂತು, ಈ ಉಪಪ್ರಕರಣದ (ಎ) ಖಂಡದಲ್ಲಿ ನಿರ್ದಿಷ್ಟಪಡಿಸಿದ ಪ್ರಾಧಿಕಾರದ ಶಿಫಾರಸ್ಸುಗಳು ಕೇಂದ್ರ ಸರ್ಕಾರಕ್ಕೆ ಬಂಧನಕಾರಿಯಾಗಿರತಕ್ಕದ್ದಲ್ಲ:

ಮತ್ತೂ ಪರಂತು, ಕೇಂದ್ರ ಸರ್ಕಾರವು ಸೇವೆ ಒದಗಿಸುವವನಿಗೆ ನೀಡಬೇಕಾದ ಹೊಸ ಲೈಸೆನ್ಸಿನ ಸಂಬಂಧದಲ್ಲಿ ಈ ಉಪಪ್ರಕರಣದ (ಎ) ಖಂಡದ (i)ನೇ ಮತ್ತು (ii)ನೇ ಉಪಖಂಡಗಳಲ್ಲಿ ನಿರ್ದಿಷ್ಟಪಡಿಸಿದ ವಿಷಯಗಳಿಗೆ ಸಂಬಂಧಿಸಿದಂತೆ ಪ್ರಾಧಿಕಾರದ ಶಿಫಾರಸ್ಸುಗಳನ್ನು ಕೋರತಕ್ಕದ್ದು ಮತ್ತು ಸರ್ಕಾರವು ಶಿಫಾರಸ್ಸುಗಳನ್ನು ಕೋರಿದ ದಿನಾಂಕದಿಂದ ಅರವತ್ತು ದಿನಗಳ ಅವಧಿಯೊಳಗೆ ಪ್ರಾಧಿಕಾರವು ತನ್ನ ಶಿಫಾರಸುಗಳನ್ನು ಕಳುಹಿಸಿಕೊಡತಕ್ಕದ್ದು:

ಮತ್ತೂ ಪರಂತು, ಪ್ರಾಧಿಕಾರವು ಈ ಉಪ–ಪ್ರಕರಣದ (ಎ) ಖಂಡದ (i)ನೇ ಮತ್ತು (ii)ನೇ ಉಪಖಂಡಗಳ ಮೇರೆಗೆ ಶಿಫಾರಸ್ಸುಗಳನ್ನು ಮಾಡುವ ಉದ್ದೇಶಕ್ಕಾಗಿ ಅಗತ್ಯವೆನಿಸಬಹುದಾದಂತಹ ಮಾಹಿತಿಯನ್ನು ಅಥವಾ ದಸ್ತಾವೇಜುಗಳನ್ನು ಒದಗಿಸುವಂತೆ ಕೇಂದ್ರ ಸರ್ಕಾರವನ್ನು ಕೋರಬಹುದು ಮತ್ತು ಆ ಸರ್ಕಾರವು, ಅಂಥ ಕೋರಿಕೆಯನ್ನು ಸ್ವೀಕರಿಸಿದ ಏಳು ದಿನಗಳ ಅವಧಿಯೊಳಗೆ ಅಂಥ ಮಾಹಿತಿಯನ್ನು ಒದಗಿಸತಕ್ಕದ್ದು:

ಮತ್ತೂ ಪರಂತು, ಎರಡನೇ ಪರಂತುಕದಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಅಥವಾ ಕೇಂದ್ರ ಸರ್ಕಾರವು ಮತ್ತು ಪ್ರಾಧಿಕಾರವು ಪರಸ್ಪರ ಒಪ್ಪಿಕೊಳ್ಳಬಹುದಾದಂಥ ಅವಧಿಯೊಳಗೆ ಪ್ರಾಧಿಕಾರದಿಂದ ಯಾವುದೇ ಶಿಫಾರಸ್ಸುಗಳು ಬರದಿದ್ದರೆ, ಕೇಂದ್ರ ಸರ್ಕಾರವು ಸೇವೆ ಒದಗಿಸುವವನಿಗೆ ಲೈಸೆನ್ಸನ್ನು ನೀಡಬಹುದು:

ಮತ್ತೂ ಪರಂತು, ಕೇಂದ್ರ ಸರ್ಕಾರವು ಪ್ರಾಧಿಕಾರದ ಶಿಫಾರಸ್ಸನ್ನು ಪರಿಶೀಲಿಸಿ, ಅಂಥ ಶಿಫಾರಸ್ಸನ್ನು ಅಂಗೀಕರಿಸಲಾಗದೆಂದು ಅಥವಾ ಮಾರ್ಪಾಟುಗಳ ಅಗತ್ಯವಿದೆಯೆಂದು ಮೇಲ್ನೋಟದ ತೀರ್ಮಾನಕ್ಕೆ ಬಂದರೆ, ಅದು ಆ ಶಿಫಾರಸ್ಸನ್ನು ಮರುಪರಿಶೀಲನೆಗಾಗಿ ಪ್ರಾಧಿಕಾರಕ್ಕೆ ಹಿಂದಕ್ಕೆ ಕಳುಹಿಸತಕ್ಕದ್ದು ಮತ್ತು ಪ್ರಾಧಿಕಾರವು, ಅಂಥ ಉಲ್ಲೇಖವನ್ನು ಸ್ವೀಕರಿಸಿದ ದಿನಾಂಕದಿಂದ ಹದಿನೈದು ದಿನಗಳ ಅವಧಿಯೊಳಗೆ, ಕೇಂದ್ರ ಸರ್ಕಾರವು ಮಾಡಿದ ಉಲ್ಲೇಖವನ್ನು ಪರಿಗಣಿಸಿದ ನಂತರ ತನ್ನ ಶಿಫಾರಸ್ಸನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಬಹುದು, ಹೆಚ್ಚಿನ ಶಿಫಾರಸ್ಸು, ಯಾವುದಾದರೂ ಇದ್ದರೆ, ಅದನ್ನು ಸ್ವೀಕರಿಸಿದ ನಂತರ, ಕೇಂದ್ರ ಸರ್ಕಾರವು ಅಂತಿಮ ತೀರ್ಮಾನವನ್ನು ತೆಗೆದುಕೊಳ್ಳತಕ್ಕದ್ದು.

(2) ಭಾರತ ಟೆಲಿಗ್ರಾಫ್ ಅಧಿನಿಯಮ, 1885ರಲ್ಲಿ (1885ರ 13) ಏನೇ ಒಳಗೊಂಡಿದ್ದರೂ, ಪ್ರಾಧಿಕಾರವು, ಕಾಲಕಾಲಕ್ಕೆ ರಾಜಪತ್ರದಲ್ಲಿ ಆದೇಶದ ಮೂಲಕ, ಯಾವ ದರಗಳಲ್ಲಿ ಸಂದೇಶವನ್ನು ಭಾರತದ ಹೊರಗಿನ ಯಾವುದೇ ದೇಶಕ್ಕೆ ರವಾನಿಸಬೇಕೋ ಆ ದರಗಳನ್ನೂ ಒಳಗೊಂಡಂತೆ ಯಾವ ದರಗಳಲ್ಲಿ ಈ ಅಧಿನಿಯಮದ ಮೇರೆಗೆ ದೂರ ಸಂಪರ್ಕ ಸೇವೆಗಳನ್ನು ಭಾರತದ ಒಳಗೆ ಮತ್ತು ಭಾರತದ ಹೊರಗೆ ಒದಗಿಸಬೇಕೋ ಆ ದರಗಳನ್ನು ಅಧಿಸೂಚಿಸಬಹುದು:

ಪರಂತು, ಪ್ರಾಧಿಕಾರವು ಅದೇ ಬಗೆಯ ದೂರಸಂಪರ್ಕ ಸೇವೆಗಳಿಗೆ ಬೇರೆ ಬೇರೆ ವ್ಯಕ್ತಿಗಳಿಗೆ ಅಥವಾ ವ್ಯಕ್ತಿಗಳ ವರ್ಗಕ್ಕೆ ಬೇರೆ ಬೇರೆ ದರಗಳನ್ನು ಅಧಿಸೂಚಿಸಬಹುದು ಮತ್ತು ಮೇಲೆ ಹೇಳಿದಂತೆ ಬೇರೆ ಬೇರೆ ದರಗಳನ್ನು ನಿಗದಿಪಡಿಸಿದ್ದರೆ ಪ್ರಾಧಿಕಾರವು ಆ ಕುರಿತು ಕಾರಣಗಳನ್ನು ದಾಖಲಿಸತಕ್ಕದ್ದು.

(3) (1)ನೇ ಉಪಪ್ರಕರಣದ ಅಥವಾ (2)ನೇ ಉಪಪ್ರಕರಣದ ಮೇರೆಗೆ ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಾಗ, ಪ್ರಾಧಿಕಾರವು, ಭಾರತದ ಸಾರ್ವಭೌಮತೆಯ ಮತ್ತು ಅಖಂಡತೆಯ, ರಾಷ್ಟ್ರದ ಭದ್ರತೆಯ, ವಿದೇಶಗಳೊಂದಿಗಿನ ಸ್ನೇಹ ಸಂಬಂಧದ, ಸಾರ್ವಜನಿಕ ಸುವ್ಯವಸ್ಥೆಯ, ಸಭ್ಯತೆಯ ಅಥವಾ ನೈತಿಕತೆಯ ಹಿತಾಸಕ್ತಿಗೆ ವಿರುದ್ಧವಾಗಿ ಕಾರ್ಯನಿರ್ವಹಿಸತಕ್ಕದ್ದಲ್ಲ.

(4) ಪ್ರಾಧಿಕಾರವು ತನ್ನ ಅಧಿಕಾರಗಳನ್ನು ಚಲಾಯಿಸುವಾಗ ಮತ್ತು ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಾಗ ಪಾರದರ್ಶಕತೆಯನ್ನು ಖಚಿತಪಡಿಸಿಕೊಳ್ಳತಕ್ಕದ್ದು.

**12. ಮಾಹಿತಿಯನ್ನು ತರಿಸಿಕೊಳ್ಳಲು, ತನಿಖೆಗಳು ಇತ್ಯಾದಿಗಳನ್ನು ನಡೆಸಲು, ಪ್ರಾಧಿಕಾರದ ಅಧಿಕಾರಗಳು.–** (1) ಪ್ರಾಧಿಕಾರವು,–

(ಎ) ಪ್ರಾಧಿಕಾರವು ಅಗತ್ಯಪಡಿಸಬಹುದಾದಂತೆ ತನ್ನ ವ್ಯವಹಾರಗಳಿಗೆ ಸಂಬಂಧಿಸಿದಂಥ ಮಾಹಿತಿಯನ್ನು ಅಥವಾ ವಿವರಣೆಯನ್ನು ಲಿಖಿತದಲ್ಲಿ ಒದಗಿಸಲು ಯಾವುದೇ ಕಾಲದಲ್ಲಿ ಯಾರೇ ಸೇವೆ ಒದಗಿಸುವವನನ್ನು ಕೇಳುವುದು; ಅಥವಾ

(ಬಿ) ಯಾರೇ ಸೇವೆ ಒದಗಿಸುವವನ ವ್ಯವಹಾರಗಳಿಗೆ ಸಂಬಂಧಿಸಿದಂತೆ ವಿಚಾರಣೆಯನ್ನು ನಡೆಸುವುದಕ್ಕೆ ಒಬ್ಬನನ್ನು ಅಥವಾ ಹೆಚ್ಚು ವ್ಯಕ್ತಿಗಳನ್ನು ನೇಮಕ ಮಾಡುವುದು; ಮತ್ತು

(ಸಿ) ಯಾರೇ ಸೇವೆ ಒದಗಿಸುವವನ ಲೆಕ್ಕದ ಪುಸ್ತಕಗಳನ್ನು ಅಥವಾ ಇತರ ದಸ್ತಾವೇಜುಗಳನ್ನು ಪರಿಶೀಲಿಸುವಂತೆ ತನ್ನ ಯಾರೇ ಅಧಿಕಾರಿಗಳಿಗೆ ಅಥವಾ ನೌಕರರಿಗೆ ನಿರ್ದೇಶಿಸುವುದು

– ವಿಹಿತವೆಂದು ಭಾವಿಸಿದರೆ, ಲಿಖಿತ ಆದೇಶದ ಮೂಲಕ, ಅದು ಹಾಗೆ ಮಾಡಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಸೇವೆ ಒದಗಿಸುವವನ ವ್ಯವಹಾರಗಳಿಗೆ ಸಂಬಂಧಿಸಿದಂತೆ ಯಾವುದೇ ವಿಚಾರಣೆಯನ್ನು ಕೈಗೊಂಡಿರುವಲ್ಲಿ,–

(ಎ) ಅಂಥ ಸೇವೆ ಒದಗಿಸುವವನು ಸರ್ಕಾರದ ಇಲಾಖೆಯಾಗಿದ್ದರೆ, ಆ ಸರ್ಕಾರಿ ಇಲಾಖೆಯ ಪ್ರತಿಯೊಬ್ಬ ಅಧಿಕಾರಿಯು;

(ಬಿ) ಅಂಥ ಸೇವೆ ಒದಗಿಸುವವನು ಕಂಪನಿಯಾಗಿದ್ದರೆ, ಅದರ ಪ್ರತಿಯೊಬ್ಬ ನಿರ್ದೇಶಕನು, ವ್ಯವಸ್ಥಾಪಕನು, ಕಾರ್ಯದರ್ಶಿಯು ಅಥವಾ ಇತರ ಅಧಿಕಾರಿಯು; ಅಥವಾ

(ಸಿ) ಅಂಥ ಸೇವೆ ಒದಗಿಸುವವನು ಫರ್ಮ್ ಆಗಿದ್ದರೆ, ಅದರ ಪ್ರತಿಯೊಬ್ಬ ಪಾಲುದಾರನು, ವ್ಯವಸ್ಥಾಪಕನು, ಕಾರ್ಯದರ್ಶಿಯು ಅಥವಾ ಇತರ ಅಧಿಕಾರಿಯು; ಅಥವಾ

(ಡಿ) (ಬಿ) ಮತ್ತು (ಸಿ) ಖಂಡಗಳಲ್ಲಿ ನಮೂದಿಸಲಾದ ಯಾರೇ ವ್ಯಕ್ತಿಯೊಂದಿಗೆ ವ್ಯವಹಾರ ನಡೆಸುತ್ತಿರುವ ಪ್ರತಿಯೊಬ್ಬ ಇತರ ವ್ಯಕ್ತಿ ಅಥವಾ ವ್ಯಕ್ತಿಗಳ ನಿಕಾಯವು

– ವಿಚಾರಣೆ ನಡೆಸುವ ಪ್ರಾಧಿಕಾರದ ಮುಂದೆ ಅಂಥ ವಿಚಾರಣೆಯ ವಸ್ತು ವಿಷಯಕ್ಕೆ ಸಂಬಂಧಿಸಿದ ಅಥವಾ ಸಂಬಂಧ ಹೊಂದಿರುವ, ತನ್ನ ಅಭಿರಕ್ಷೆಯಲ್ಲಿರುವ ಅಥವಾ ಅಧಿಕಾರದಲ್ಲಿರುವ ಅಂಥ ಎಲ್ಲಾ ಲೆಕ್ಕದ ಪುಸ್ತಕಗಳನ್ನು ಅಥವಾ ಇತರ ದಸ್ತಾವೇಜುಗಳನ್ನು ಹಾಜರುಪಡಿಸುವುದಕ್ಕೆ ಮತ್ತು ಆತನನ್ನು ಅಗತ್ಯಪಡಿಸಲಾದ ಯಾವುದೇ ಅಂತಹ ವಿವರಣೆಯನ್ನು ಅಥವಾ ಸಂದರ್ಭಾನುಸಾರ, ಅದಕ್ಕೆ ಸಂಬಂಧಿಸಿದ ಮಾಹಿತಿಯನ್ನು ನಿರ್ದಿಷ್ಟಪಡಿಸಬಹುದಾದಂಥ ಕಾಲದೊಳಗೆ, ಒದಗಿಸುವುಕ್ಕೆ ಸಹ ಬದ್ಧನಾಗಿರತಕ್ಕದ್ದು.

(3) ಸೇವೆ ಒದಗಿಸುವ ಪ್ರತಿಯೊಬ್ಬನು ನಿಯಮಿಸಬಹುದಾದಂತೆ ಲೆಕ್ಕದ ಪುಸ್ತಕಗಳನ್ನು ಅಥವಾ ಇತರ ದಸ್ತಾವೇಜುಗಳನ್ನು ಇಟ್ಟುಕೊಂಡು ಬರತಕ್ಕದ್ದು.

(4) ಪ್ರಾಧಿಕಾರವು, ಸೇವೆ ಒದಗಿಸುವವರು ಸಮರ್ಪಕವಾಗಿ ಕಾರ್ಯ ನಿರ್ವಹಿಸುವುದಕ್ಕಾಗಿ ಸೇವೆ ಒದಗಿಸುವವರಿಗೆ ಅವಶ್ಯಕವೆಂದು ತಾನು ಪರಿಗಣಿಸಬಹುದಾದಂಥ ನಿರ್ದೇಶನಗಳನ್ನು ನೀಡಲು ಅಧಿಕಾರವನ್ನು ಹೊಂದಿರತಕ್ಕದ್ದು.

**13. ನಿರ್ದೇಶನಗಳನ್ನು ನೀಡಲು ಪ್ರಾಧಿಕಾರದ ಅಧಿಕಾರ.–** ಪ್ರಾಧಿಕಾರವು, 11ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ತನ್ನ ಪ್ರಕಾರ್ಯಗಳ ನಿರ್ವಹಣೆಗಾಗಿ ಅವಶ್ಯವೆಂದು ತಾನು ಪರಿಗಣಿಸಬಹುದಾದಂಥ ನಿರ್ದೇಶನಗಳನ್ನು ಕಾಲಕಾಲಕ್ಕೆ ಸೇವೆ ಒದಗಿಸುವವರಿಗೆ ನೀಡಬಹುದು:

ಪರಂತು, 12ನೇ ಪ್ರಕರಣದ (4)ನೇ ಉಪಪ್ರಕರಣದ ಮೇರೆಗೆ ಅಥವಾ ಈ ಪ್ರಕರಣದ ಮೇರೆಗೆ ಯಾವುದೇ ನಿರ್ದೇಶನವನ್ನು, 11ನೇ ಪ್ರಕರಣದ (1)ನೇ ಉಪಪ್ರಕರಣದ (ಬಿ) ಖಂಡದಲ್ಲಿ ನಿರ್ದಿಷ್ಟಪಡಿಸಿದ ವಿಷಯಗಳಿಗೆ ಸಂಬಂಧಿಸಿದಂತೆ ಹೊರತು ನೀಡತಕ್ಕದ್ದಲ್ಲ.

## ಅಧ್ಯಾಯ –IV

## ಅಪೀಲು ನ್ಯಾಯಾಧಿಕರಣ

**14. ಅಪೀಲು ನ್ಯಾಯಾಧಿಕರಣದ ಸ್ಥಾಪನೆ.–** ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ, ದೂರಸಂಪರ್ಕ ವಿವಾದಗಳ ಇತ್ಯರ್ಥ ಮತ್ತು ಅಪೀಲು ನ್ಯಾಯಾಧಿಕರಣ ಎಂದು ಕರೆಯಲಾಗುವ ಅಪೀಲು ನ್ಯಾಯಾಧಿಕರಣವನ್ನು,–

ಎ) (i) ಲೈಸೆನ್ಸ್ ನೀಡುವವನ ಮತ್ತು ಲೈಸೆನ್ಸ್ ಪಡೆದವನ ನಡುವಿನ;

(ii) ಸೇವೆ ಒದಗಿಸುವ ಇಬ್ಬರ ಅಥವಾ ಹೆಚ್ಚಿನವರ ನಡುವಿನ;

(iii) ಸೇವೆ ಒದಗಿಸುವವನ ಮತ್ತು ಬಳಕೆದಾರರ ಒಂದು ಗುಂಪಿನ ನಡುವಿನ

– ಯಾವುದೇ ವಿವಾದವನ್ನು ನ್ಯಾಯ ನಿರ್ಣಯಿಸಲು :

ಪರಂತು, ಈ ಖಂಡದಲ್ಲಿರುವುದು ಯಾವುದೂ,–

(ಎ) ಏಕಸ್ವಾಮ್ಯ ಮತ್ತು ಪರಿಬಂಧಕ ವ್ಯಾಪಾರ ಪದ್ಧತಿಗಳ ಅಧಿನಿಯಮ, 1969ರ (1969ರ 54) 5ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಸ್ಥಾಪಿಸಲಾದ ಏಕಸ್ವಾಮ್ಯ ಮತ್ತು ಪರಿಬಂಧಕ ವ್ಯಾಪಾರ ಪದ್ಧತಿಗಳ ಆಯೋಗದ ಅಧಿಕಾರ ವ್ಯಾಪ್ತಿಗೆ ಒಳಪಟ್ಟಿರುವ ಏಕಸ್ವಾಮ್ಯ ವ್ಯಾಪಾರ ಪದ್ಧತಿಗೆ, ಪರಿಬಂಧಕ ವ್ಯಾಪಾರ ಪದ್ಧತಿಗೆ ಮತ್ತು ಅನುಚಿತ ವ್ಯಾಪಾರ ಪದ್ಧತಿಗೆ;

(ಬಿ) ಬಳಕೆದಾರ (ಸಂರಕ್ಷಣಾ) ಅಧಿನಿಯಮ, 1986ರ (1986ರ 68) 9ನೇ ಪ್ರಕರಣದ ಮೇರೆಗೆ ಸ್ಥಾಪಿತವಾದ ಬಳಕೆದಾರರ ವಿವಾದಗಳ ಪರಿಹಾರ ವೇದಿಕೆಯ ಅಥವಾ ಬಳಕೆದಾರ ವಿವಾದಗಳ ಪರಿಹಾರ ಆಯೋಗದ ಅಥವಾ ರಾಷ್ಟ್ರೀಯ ಬಳಕೆದಾರರ ವಿವಾದಗಳ ಪರಿಹಾರ ಆಯೋಗದ ಮುಂದೆ ಊರ್ಜಿತವಾಗಬಹುದಾದ ಬಳಕೆದಾರನ ದೂರಿಗೆ;

(ಸಿ) ಟೆಲಿಗ್ರಾಫ್ ಪ್ರಾಧಿಕಾರದ ಮತ್ತು ಭಾರತ ಟೆಲಿಗ್ರಾಫ್ ಅಧಿನಿಯಮ, 1885ರ (1885ರ 13) 7ಬಿ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಯಾರೇ ಇತರ ವ್ಯಕ್ತಿಯ ನಡುವಿನ ವಿವಾದಕ್ಕೆ

– ಸಂಬಂಧಿಸಿದ ವಿಷಯಗಳಿಗೆ ಅನ್ವಯವಾಗತಕ್ಕದ್ದಲ್ಲ.

(ಬಿ) ಈ ಅಧಿನಿಯಮದ ಮೇರೆಗೆ ಪ್ರಾಧಿಕಾರದ ಯಾವುದೇ ನಿರ್ದೇಶನದ, ತೀರ್ಮಾನದ ಅಥವಾ ಆದೇಶದ ವಿರುದ್ಧ ಸಲ್ಲಿಸಿದ ಅಪೀಲಿನ ವಿಚಾರಣೆ ಮಾಡಲು ಮತ್ತು ವಿಲೆ ಮಾಡಲು

– ಸ್ಥಾಪಿಸತಕ್ಕದ್ದು.

**14ಎ. ವಿವಾದಗಳ ಇತ್ಯರ್ಥಕ್ಕೆ ಅರ್ಜಿ ಮತ್ತು ಅಪೀಲು ನ್ಯಾಯಾಧಿಕರಣಕ್ಕೆ ಅಪೀಲುಗಳು.–** (1) ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು ಅಥವಾ ಸ್ಥಳೀಯ ಪ್ರಾಧಿಕಾರವು ಅಥವಾ ಯಾರೇ ವ್ಯಕ್ತಿಯು 14ನೇ ಪ್ರಕರಣದ (ಎ) ಖಂಡದಲ್ಲಿ ಉಲ್ಲೇಖಿಸಲಾದ ಯಾವುದೇ ವಿವಾದದ ನ್ಯಾಯ ನಿರ್ಣಯಕ್ಕಾಗಿ ಅಪೀಲು ನ್ಯಾಯಾಧಿಕರಣಕ್ಕೆ ಅರ್ಜಿಯನ್ನು ಸಲ್ಲಿಸಬಹುದು.

(2) ಪ್ರಾಧಿಕಾರವು ಮಾಡಿದ ಯಾವುದೇ ನಿರ್ದೇಶನದಿಂದ, ತೀರ್ಮಾನದಿಂದ ಅಥವಾ ಆದೇಶದಿಂದ ಬಾಧಿತವಾದ ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು ಅಥವಾ ಸ್ಥಳೀಯ ಪ್ರಾಧಿಕಾರವು ಅಥವಾ ಬಾಧಿತನಾದ ಯಾರೇ ವ್ಯಕ್ತಿಯು, ಅಪೀಲು ನ್ಯಾಯಾಧಿಕರಣಕ್ಕೆ ಅಪೀಲನ್ನು ಸಲ್ಲಿಸಬಹುದು.

(3) (2)ನೇ ಉಪಪ್ರಕರಣದ ಮೇರೆಗಿನ ಪ್ರತಿಯೊಂದು ಅಪೀಲನ್ನು, ಪ್ರಾಧಿಕಾರವು ಮಾಡಿದ ನಿರ್ದೇಶನದ ಅಥವಾ ಆದೇಶದ ಅಥವಾ ತೀರ್ಮಾನದ ಒಂದು ಪ್ರತಿಯನ್ನು ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು ಅಥವಾ ಸ್ಥಳೀಯ ಪ್ರಾಧಿಕಾರವು ಅಥವಾ ಬಾಧಿತ ವ್ಯಕ್ತಿಯು ಅದನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿನಗಳ ಅವಧಿಯೊಳಗೆ ಸಲ್ಲಿಸತಕ್ಕದ್ದು ಮತ್ತು ಅಂಥ ಅಪೀಲು, ನಿಯಮಿಸಬಹುದಾದಂಥ ನಮೂನೆಯಲ್ಲಿ ಇರತಕ್ಕದ್ದು, ಅದನ್ನು ಅಂಥ ವಿಧಾನದಲ್ಲಿ ಪರಿಶೀಲನೆ ಮಾಡಿರತಕ್ಕದ್ದು ಮತ್ತು ಅಂಥ ಫೀಜು ಅದರ ಜೊತೆಯಲ್ಲಿರತಕ್ಕದ್ದು:

ಪರಂತು, ಅಪೀಲು ನ್ಯಾಯಾಧಿಕರಣವು, ಮೂವತ್ತು ದಿವಸಗಳ ಸದರಿ ಅವಧಿಯು ಮುಕ್ತಾಯವಾದ ನಂತರವೂ ಆ ಅವಧಿಯೊಳಗೆ ಅಪೀಲು ದಾಖಲಿಸಲು ಆಗದಿದ್ದುದ್ದಕ್ಕೆ ಸಾಕಷ್ಟು ಕಾರಣವಿತ್ತೆಂದು ಅದಕ್ಕೆ ಮನದಟ್ಟಾದರೆ ಯಾವುದೇ ಅಪೀಲನ್ನು ಪುರಸ್ಕರಿಸಬಹುದು.

(4) (1)ನೇ ಉಪಪ್ರಕರಣದ ಮೇರೆಗೆ ಅರ್ಜಿಯನ್ನು ಅಥವಾ (2)ನೇ ಉಪಪ್ರಕರಣದ ಮೇರೆಗೆ ಅಪೀಲನ್ನು ಸ್ವೀಕರಿಸಿದ ನಂತರ, ಅಪೀಲು ನ್ಯಾಯಾಧಿಕರಣವು, ವಿವಾದದ ಅಥವಾ ಅಪೀಲಿನ ಪಕ್ಷಕಾರರಿಗೆ ತಮ್ಮ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡಿದ ನಂತರ, ಆ ಬಗ್ಗೆ ಸೂಕ್ತವೆಂದು ತಾನು ಭಾವಿಸಬಹುದಾದಂಥ ಆದೇಶಗಳನ್ನು ಹೊರಡಿಸಬಹುದು.

(5) ಅಪೀಲು ನ್ಯಾಯಾಧಿಕರಣವು, ತಾನು ಮಾಡಿದ ಪ್ರತಿಯೊಂದು ಆದೇಶದ ಪ್ರತಿಯನ್ನು ವಿವಾದದ ಅಥವಾ ಸಂದರ್ಭಾನುಸಾರ ಅಪೀಲಿನ ಪಕ್ಷಕಾರರಿಗೆ ಮತ್ತು ಪ್ರಾಧಿಕಾರಕ್ಕೆ ಕಳುಹಿಸತಕ್ಕದ್ದು.

(6) (1)ನೇ ಉಪಪ್ರಕರಣದ ಮೇರೆಗೆ ಸಲ್ಲಿಸಲಾದ ಅರ್ಜಿಯನ್ನು ಅಥವಾ (2)ನೇ ಉಪಪ್ರಕರಣದ ಮೇರೆಗೆ ಸಲ್ಲಿಸಲಾದ ಅಪೀಲಿನ ಬಗ್ಗೆ ನ್ಯಾಯಾಧಿಕರಣವು ಸಾಧ್ಯವಾದಷ್ಟು ಶೀಘ್ರವಾಗಿ ವ್ಯವಹರಿಸತಕ್ಕದ್ದು ಮತ್ತು ಅರ್ಜಿಯನ್ನು ಅಥವಾ ಸಂದರ್ಭಾನುಸಾರ ಅಪೀಲನ್ನು ಸ್ವೀಕರಿಸಿದ ದಿನಾಂಕದಿಂದ ತೊಂಬತ್ತು ದಿವಸಗಳೊಳಗಾಗಿ ಆ ಅರ್ಜಿಯನ್ನು ಅಥವಾ ಆ ಅಪೀಲನ್ನು ಅಂತಿಮವಾಗಿ ವಿಲೆ ಮಾಡುವುದಕ್ಕೆ ಪ್ರಯತ್ನಿಸತಕ್ಕದ್ದು:

ಪರಂತು, ಅಂಥ ಯಾವುದೇ ಅರ್ಜಿಯನ್ನು ಅಥವಾ ಅಪೀಲನ್ನು ಸದರಿ ತೊಂಬತ್ತು ದಿವಸಗಳ ಅವಧಿಯೊಳಗೆ ವಿಲೆ ಮಾಡಲು ಸಾಧ್ಯವಾಗದಿದ್ದಲ್ಲಿ, ಅಪೀಲು ನ್ಯಾಯಾಧಿಕರಣವು, ಆ ಅವಧಿಯೊಳಗೆ ಆ ಅರ್ಜಿಯನ್ನು ಅಥವಾ ಆ ಅಪೀಲನ್ನು ವಿಲೆ ಮಾಡದಿರುವುದಕ್ಕೆ ಕಾರಣಗಳನ್ನು ಲಿಖಿತದಲ್ಲಿ ದಾಖಲಿಸತಕ್ಕದ್ದು.

(7) ಅಪೀಲು ನ್ಯಾಯಾಧಿಕರಣವು (1)ನೇ ಉಪಪ್ರಕರಣದ ಮೇರೆಗೆ ಸಲ್ಲಿಸಿದ ಯಾವುದೇ ಅರ್ಜಿಯಲ್ಲಿರುವ ಯಾವುದೇ ವಿವಾದದ ಅಥವಾ (2)ನೇ ಉಪಪ್ರಕರಣದ ಮೇರೆಗೆ ಸಲ್ಲಿಸಿದ ಅಪೀಲಿನಲ್ಲಿ ಉಲ್ಲೇಖಿಸಲಾದ ಪ್ರಾಧಿಕಾರದ ಯಾವುದೇ ನಿರ್ದೇಶನದ ಅಥವಾ ಆದೇಶದ ಅಥವಾ ತೀರ್ಮಾನದ ಕಾನೂನು ಸಮ್ಮತತೆಯನ್ನು ಅಥವಾ ಔಚಿತ್ಯತೆಯನ್ನು ಅಥವಾ ಸರಿತನವನ್ನು ಪರಿಶೀಲಿಸುವ ಉದ್ದೇಶಕ್ಕಾಗಿ, ತಾನಾಗಿಯೇ ಅಥವಾ ಇತರೇ ರೀತಿಯಲ್ಲಿ ಅಂಥ ಅರ್ಜಿಯನ್ನು ಅಥವಾ ಅಪೀಲನ್ನು ವಿಲೆ ಮಾಡುವುದಕ್ಕೆ ಸುಸಂಬದ್ಧ ದಾಖಲೆಗಳನ್ನು ತರಿಸಿಕೊಳ್ಳಬಹುದು ಮತ್ತು ತಾನು ಸೂಕ್ತವೆಂದು ಭಾವಿಸಬಹುದಾದಂಥ ಆದೇಶಗಳನ್ನು ಮಾಡಬಹುದು.

**14ಬಿ. ಅಪೀಲು ನ್ಯಾಯಾಧಿಕರಣದ ರಚನೆ.–** (1) ಅಪೀಲು ನ್ಯಾಯಾಧಿಕರಣವು, ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ನೇಮಕ ಮಾಡುವ ಒಬ್ಬ ಅಧ್ಯಕ್ಷನನ್ನು ಮತ್ತು ಇಬ್ಬರಿಗಿಂತ ಹೆಚ್ಚಿಲ್ಲದ ಸದಸ್ಯರನ್ನು ಒಳಗೊಂಡಿರತಕ್ಕದ್ದು.

(2) ಕೇಂದ್ರ ಸರ್ಕಾರವು ಭಾರತದ ಮುಖ್ಯ ನ್ಯಾಯಾಧೀಶರೊಂದಿಗೆ ಸಮಾಲೋಚಿಸಿ ಅಪೀಲು ನ್ಯಾಯಾಧಿಕರಣದ ಅಧ್ಯಕ್ಷನ ಮತ್ತು ಸದಸ್ಯರ ಆಯ್ಕೆಯನ್ನು ಮಾಡತಕ್ಕದ್ದು.

(3) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು,–

(ಎ) ಅಪೀಲು ನ್ಯಾಯಾಧಿಕರಣದ ಅಧಿಕಾರ ವ್ಯಾಪ್ತಿಯನ್ನು ಅದರ ನ್ಯಾಯ ಪೀಠಗಳು ಚಲಾಯಿಸಬಹುದು;

(ಬಿ) ಅಪೀಲು ನ್ಯಾಯಾಧಿಕರಣದ ಅಧ್ಯಕ್ಷನು ಸೂಕ್ತವೆಂದು ತಾನು ಭಾವಿಸಬಹುದಾದಂತೆ ಅಪೀಲು ನ್ಯಾಯಾಧಿಕರಣದ ಒಬ್ಬರು ಅಥವಾ ಇಬ್ಬರು ಸದಸ್ಯರನ್ನೊಳಗೊಂಡ ನ್ಯಾಯಪೀಠವನ್ನು ರಚಿಸಬಹುದು;

(ಸಿ) ಅಪೀಲು ನ್ಯಾಯಾಧಿಕರಣದ ನ್ಯಾಯಪೀಠಗಳು ಸಾಮಾನ್ಯವಾಗಿ ನವ ದೆಹಲಿಯಲ್ಲಿ ಮತ್ತು ಕೇಂದ್ರ ಸರ್ಕಾರವು ಅಪೀಲು ನ್ಯಾಯಾಧಿಕರಣದ ಅಧ್ಯಕ್ಷನೊಂದಿಗೆ ಸಮಾಲೋಚಿಸಿ, ಅಧಿಸೂಚಿಸಬಹುದಾದಂತಹ ಇತರ ಸ್ಥಳಗಳಲ್ಲಿ ಸೇರತಕ್ಕದ್ದು;

(ಡಿ) ಅಪೀಲು ನ್ಯಾಯಾಧಿಕರಣದ ಪ್ರತಿಯೊಂದು ನ್ಯಾಯಪೀಠವು ಯಾವ ಪ್ರದೇಶಗಳಿಗೆ ಸಂಬಂಧಿಸಿದಂತೆ ತನ್ನ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸಬಹುದೋ ಆ ಪ್ರದೇಶಗಳನ್ನು ಕೇಂದ್ರ ಸರ್ಕಾರವು ಅಧಿಸೂಚಿಸತಕ್ಕದ್ದು.

(4) (2)ನೇ ಉಪ–ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಅಪೀಲು ನ್ಯಾಯಾಧಿಕರಣದ ಅಧ್ಯಕ್ಷನು, ಅಂಥ ನ್ಯಾಯಾಧಿಕರಣದ ಸದಸ್ಯನನ್ನು ಒಂದು ನ್ಯಾಯಪೀಠದಿಂದ ಮತ್ತೊಂದು ನ್ಯಾಯ ಪೀಠಕ್ಕೆ ವರ್ಗಾಯಿಸಬಹುದು.

(5) ಯಾವುದೇ ಮೊಕದ್ದಮೆಯ ಅಥವಾ ವಿಷಯದ ವಿಚಾರಣೆಯ ಯಾವುದೇ ಹಂತದಲ್ಲಿ, ಆ ಮೊಕದ್ದಮೆಯು ಅಥವಾ ವಿಷಯವು ಇಬ್ಬರು ಸದಸ್ಯರನ್ನೊಳಗೊಂಡ ನ್ಯಾಯ ಪೀಠವು ವಿಚಾರಣೆ

ನಡೆಸಬಹುದಾದಂಥ ಸ್ವರೂಪದ್ದೆಂದು ಅಪೀಲು ನ್ಯಾಯಾಧಿಕರಣದ ಅಧ್ಯಕ್ಷನಿಗೆ ಅಥವಾ ಸದಸ್ಯನಿಗೆ ಕಂಡು ಬಂದರೆ, ಆ ಮೊಕದ್ದಮೆಯನ್ನು ಅಥವಾ ವಿಷಯವನ್ನು ಅಧ್ಯಕ್ಷನು, ಸೂಕ್ತವೆಂದು ತಾನು ಭಾವಿಸಬಹುದಾದಂಥ ನ್ಯಾಯಪೀಠಕ್ಕೆ ವರ್ಗಾಯಿಸಬಹುದು.

**14.ಸಿ. ಅಧ್ಯಕ್ಷನ ಮತ್ತು ಸದಸ್ಯರ ನೇಮಕಕ್ಕೆ ಅರ್ಹತೆಗಳು.–** ವ್ಯಕ್ತಿಯು,–

(ಎ) ಅಧ್ಯಕ್ಷನ ಸಂದರ್ಭದಲ್ಲಿ, ಅವನು ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಿರುವ ಅಥವಾ ನ್ಯಾಯಾಧೀಶನಾಗಿದ್ದ ಅಥವಾ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಯಾಗಿರುವ ಅಥವಾ ಮುಖ್ಯ ನ್ಯಾಯಮೂರ್ತಿಯಾಗಿದ್ದ ಹೊರತು;

(ಬಿ) ಸದಸ್ಯನ ಸಂದರ್ಭದಲ್ಲಿ, ಭಾರತ ಸರ್ಕಾರದ ಕಾರ್ಯದರ್ಶಿಯ ಹುದ್ದೆಯನ್ನು ಅಥವಾ ಎರಡು ವರ್ಷಗಳಿಗಿಂತ ಕಡಿಮೆಯಿಲ್ಲದ ಅವಧಿಗೆ ಕೇಂದ್ರ ಸರ್ಕಾರದಲ್ಲಿ ಅಥವಾ ರಾಜ್ಯ ಸರ್ಕಾರದಲ್ಲಿ ಯಾವುದೇ ತತ್ಸಮಾನ ಹುದ್ದೆಯನ್ನು ಹೊಂದಿದ್ದ ಹೊರತು ಅಥವಾ ವ್ಯಕ್ತಿಯು ತಂತ್ರಜ್ಞಾನ, ದೂರಸಂಪರ್ಕ, ಕೈಗಾರಿಕೆ, ವಾಣಿಜ್ಯ ಅಥವಾ ಆಡಳಿತ ಕ್ಷೇತ್ರದಲ್ಲಿ ನಿಷ್ಣಾತನಾಗಿದ್ದ ಹೊರತು

– ಅಪೀಲು ನ್ಯಾಯಾಧಿಕರಣದ ಅಧ್ಯಕ್ಷನಾಗಿ ಅಥವಾ ಸದಸ್ಯನಾಗಿ ನೇಮಕ ಹೊಂದಲು ಅರ್ಹನಾಗಿರತಕ್ಕದ್ದಲ್ಲ.

**14ಡಿ. ಪದಾವಧಿ.–** ಅಪೀಲು ನ್ಯಾಯಾಧಿಕರಣದ ಅಧ್ಯಕ್ಷನು ಮತ್ತು ಪ್ರತಿಯೊಬ್ಬ ಇತರ ಸದಸ್ಯನು, ತಾನು ಪದವನ್ನು ಸ್ವೀಕರಿಸಿದ ದಿನಾಂಕದಿಂದ ಮೂರು ವರ್ಷಗಳಿಗೆ ಮೀರದ ಅವಧಿಗೆ ಪದಧಾರಣ ಮಾಡತಕ್ಕದ್ದು:

ಪರಂತು, ಅಧ್ಯಕ್ಷನು ಅಥವಾ ಇತರ ಸದಸ್ಯನು,–

(ಎ) ಅಧ್ಯಕ್ಷನ ಸಂದರ್ಭದಲ್ಲಿ, ಎಪ್ಪತ್ತು ವರ್ಷ ವಯಸ್ಸು;

(ಬಿ) ಯಾರೇ ಇತರ ಸದಸ್ಯನ ಸಂದರ್ಭದಲ್ಲಿ, ಅರವತ್ತೈದು ವರ್ಷ ವಯಸ್ಸು

– ತುಂಬಿದ ನಂತರ ಪದಧಾರಣ ಮಾಡತಕ್ಕದ್ದಲ್ಲ.

**14ಇ. ಸೇವೆಯ ನಿಬಂಧನೆಗಳು ಮತ್ತು ಷರತ್ತುಗಳು.–** ಅಪೀಲು ನ್ಯಾಯಾಧಿಕರಣದ ಅಧ್ಯಕ್ಷನಿಗೆ ಮತ್ತು ಇತರ ಸದಸ್ಯರಿಗೆ ಸಂದಾಯ ಮಾಡಬೇಕಾದ ಸಂಬಳ ಮತ್ತು ಭತ್ಯೆಗಳು ಮತ್ತು ಇತರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕದ್ದು:

ಪರಂತು, ಅಪೀಲು ನ್ಯಾಯಾಧಿಕರಣದ ಅಧ್ಯಕ್ಷನ ಅಥವಾ ಸದಸ್ಯನ ಸಂಬಳ ಮತ್ತು ಭತ್ಯೆಗಳನ್ನು ಅಥವಾ ಇತರ ಸೇವಾ ನಿಬಂಧನೆಗಳನ್ನು ಮತ್ತು ಷರತ್ತುಗಳನ್ನು ಅವರ ನೇಮಕದ ನಂತರ ಅವರಿಗೆ ಅನಾನುಕೂಲವಾಗುವಂತೆ ವ್ಯತ್ಯಸ್ಥಗೊಳಿಸತಕ್ಕದ್ದಲ್ಲ.

**14ಎಫ್. ಖಾಲಿ ಸ್ಥಾನಗಳು.–** ತಾತ್ಕಾಲಿಕ ಗೈರು ಹಾಜರಿಯನ್ನು ಹೊರತುಪಡಿಸಿದ ಇತರ ಕಾರಣಗಳಿಗಾಗಿ ಅಪೀಲು ನ್ಯಾಯಾಧಿಕರಣದ ಅಧ್ಯಕ್ಷನ ಅಥವಾ ಸದಸ್ಯನ ಹುದ್ದೆಯಲ್ಲಿ ಯಾವುದೇ ಸ್ಥಾನ ಖಾಲಿಯಾದರೆ, ಆ ಖಾಲಿ ಸ್ಥಾನವನ್ನು ತುಂಬುವುದಕ್ಕೆ ಕೇಂದ್ರ ಸರ್ಕಾರವು ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ಮತ್ತೊಬ್ಬ ವ್ಯಕ್ತಿಯನ್ನು ನೇಮಕ ಮಾಡತಕ್ಕದ್ದು ಮತ್ತು ಆ ಖಾಲಿ ಸ್ಥಾನವನ್ನು

ಯಾವ ಹಂತದಲ್ಲಿ ತುಂಬಲಾಗಿದೆಯೋ ಆ ಹಂತದಿಂದ ಅಪೀಲು ನ್ಯಾಯಾಧಿಕರಣದ ಮುಂದಿರುವ ವ್ಯವಹರಣೆಗಳನ್ನು ಮುಂದುವರಿಸಬಹುದು.

**14ಜಿ. ಪದದಿಂದ ತೆಗೆದುಹಾಕುವುದು ಮತ್ತು ರಾಜೀನಾಮೆ.–** (1) ಕೇಂದ್ರ ಸರ್ಕಾರವು, ಅಪೀಲು ನ್ಯಾಯಾಧಿಕರಣದ ಅಧ್ಯಕ್ಷನನ್ನು ಅಥವಾ ಯಾರೇ ಸದಸ್ಯನನ್ನು, –

(ಎ) ಅವನು ದಿವಾಳಿಯೆಂದು ನ್ಯಾಯ ನಿರ್ಣೀತನಾಗಿದ್ದರೆ; ಅಥವಾ

(ಬಿ) ಅವನು ಕೇಂದ್ರ ಸರ್ಕಾರದ ಅಭಿಪ್ರಾಯದಲ್ಲಿ, ನೈತಿಕ ಅಧಃಪತನವನ್ನು ಒಳಗೊಂಡ ಅಪರಾಧಕ್ಕಾಗಿ ಅಪರಾಧಿಯೆಂದು ನಿರ್ಣೀತನಾಗಿದ್ದರೆ; ಅಥವಾ

(ಸಿ) ಅಧ್ಯಕ್ಷನಾಗಿ ಅಥವಾ ಸದಸ್ಯನಾಗಿ ಕಾರ್ಯನಿರ್ವಹಿಸಲು ದೈಹಿಕವಾಗಿ ಅಥವಾ ಮಾನಸಿಕವಾಗಿ ಅವನು ಅಸಮರ್ಥನಾಗಿದ್ದರೆ; ಅಥವಾ

(ಡಿ) ಅಧ್ಯಕ್ಷನಾಗಿ ಅಥವಾ ಸದಸ್ಯನಾಗಿ ತನ್ನ ಪ್ರಕಾರ್ಯಗಳಿಗೆ ಪ್ರತಿಕೂಲ ಪರಿಣಾಮವನ್ನುಂಟು ಮಾಡುವ ಸಂಭವವಿರುವಂಥ ಹಣಕಾಸಿನ ಅಥವಾ ಇತರ ಹಿತಾಸಕ್ತಿಯನ್ನು ಅವನು ಹೊಂದಿದ್ದರೆ; ಅಥವಾ

(ಇ) ಅವನು ತನ್ನ ಪದದಲ್ಲಿ ಮುಂದುವರಿಯುವುದರಿಂದ ಸಾರ್ವಜನಿಕ ಹಿತಾಸಕ್ತಿಗೆ ಬಾಧಕವಾಗುವಂತೆ ಅವನು ತನ್ನ ಸ್ಥಾನವನ್ನು ದುರುಪಯೋಗ ಪಡಿಸಿಕೊಂಡಿದ್ದರೆ

– ಪದದಿಂದ ತೆಗೆದುಹಾಕಬಹುದು.

(2) (1)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಅಪೀಲು ನ್ಯಾಯಾಧಿಕರಣದ ಅಧ್ಯಕ್ಷನನ್ನು ಅಥವಾ ಸದಸ್ಯನನ್ನು ಆ ಉಪಪ್ರಕರಣದ (ಡಿ) ಖಂಡದಲ್ಲಿ ಅಥವಾ (ಇ) ಖಂಡದಲ್ಲಿ ನಿರ್ದಿಷ್ಟಪಡಿಸಿದ ಕಾರಣದ ಮೇಲೆ ಕೇಂದ್ರ ಸರ್ಕಾರವು ಈ ಬಗ್ಗೆ ಸರ್ವೋಚ್ಚ ನ್ಯಾಯಾಲಯಕ್ಕೆ ಮಾಡಿರುವ ಉಲ್ಲೇಖದ ಮೇಲೆ ಅದು ಈ ಕುರಿತು ನಿರ್ದಿಷ್ಟಪಡಿಸಬಹುದಾದಂಥ ಕಾರ್ಯವಿಧಾನಕ್ಕೆ ಅನುಸಾರವಾಗಿ ವಿಚಾರಣೆಯನ್ನು ನಡೆಸಿದ ನಂತರ ಅಂಥ ಕಾರಣ ಅಥವಾ ಕಾರಣಗಳ ಮೇಲೆ ಆ ಅಧ್ಯಕ್ಷನನ್ನು ಅಥವಾ ಆ ಸದಸ್ಯನನ್ನು ಪದದಿಂದ ತೆಗೆದುಹಾಕಬೇಕೆಂದು ವರದಿ ಮಾಡಿದ್ದ ಹೊರತು, ಪದದಿಂದ ತೆಗೆದುಹಾಕತಕ್ಕದ್ದಲ್ಲ.

(3) ಕೇಂದ್ರ ಸರ್ಕಾರವು, ಅಪೀಲು ನ್ಯಾಯಾಧಿಕರಣದ ಅಧ್ಯಕ್ಷನ ಅಥವಾ ಸದಸ್ಯನ ಬಗ್ಗೆ (2)ನೇ ಉಪ ಪ್ರಕರಣದ ಮೇರೆಗೆ ಸರ್ವೋಚ್ಚ ನ್ಯಾಯಾಲಯಕ್ಕೆ ಉಲ್ಲೇಖ ಮಾಡಿದಾಗ, ಕೇಂದ್ರ ಸರ್ಕಾರವು ಸರ್ವೋಚ್ಚ ನ್ಯಾಯಾಲಯದಿಂದ ಅಂಥ ಉಲ್ಲೇಖವನ್ನು ಕುರಿತು ವರದಿಯನ್ನು ಸ್ವೀಕರಿಸಿ ಆದೇಶ ಹೊರಡಿಸುವವರೆಗೆ ಆ ಅಧ್ಯಕ್ಷನನ್ನು ಅಥವಾ ಸದಸ್ಯನನ್ನು ಪದದಿಂದ ಅಮಾನತ್ತಿನಲ್ಲಿಡಬಹುದು.

**14ಹೆಚ್. ಅಪೀಲು ನ್ಯಾಯಾಧಿಕರಣದ ಸಿಬ್ಬಂದಿ.–** (1) ಕೇಂದ್ರ ಸರ್ಕಾರವು, ಸೂಕ್ತವೆಂದು ತಾನು ಭಾವಿಸಬಹುದಾದಂಥ ಅಧಿಕಾರಿಗಳನ್ನು ಮತ್ತು ನೌಕರರನ್ನು ಅಪೀಲು ನ್ಯಾಯಾಧಿಕರಣಕ್ಕೆ ಒದಗಿಸತಕ್ಕದ್ದು.

(2) ಅಪೀಲು ನ್ಯಾಯಾಧಿಕರಣದ ಅಧಿಕಾರಿಗಳು ಮತ್ತು ನೌಕರರು, ಅದರ ಅಧ್ಯಕ್ಷನ ಸಾಮಾನ್ಯ ಮೇಲ್ವಿಚಾರಣೆಗೊಳಪಟ್ಟು ತಮ್ಮ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

(3) ಅಪೀಲು ನ್ಯಾಯಾಧಿಕರಣದ ಅಧಿಕಾರಿಗಳ ಮತ್ತು ನೌಕರರ ಸಂಬಳಗಳು ಮತ್ತು ಭತ್ಯೆಗಳು ಮತ್ತು ಇತರ ಸೇವಾ ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

**14ಐ. ನ್ಯಾಯಪೀಠಗಳಿಗೆ ಕೆಲಸದ ಹಂಚಿಕೆ.–** ನ್ಯಾಯ ಪೀಠಗಳನ್ನು ರಚಿಸಿರುವಲ್ಲಿ, ಅಪೀಲು ನ್ಯಾಯಾಧಿಕರಣದ ಅಧ್ಯಕ್ಷನು, ಕಾಲಕಾಲಕ್ಕೆ ಅಧಿಸೂಚನೆಯ ಮೂಲಕ, ನ್ಯಾಯ ಪೀಠಗಳ ನಡುವೆ ಅಪೀಲು ನ್ಯಾಯಾಧಿಕರಣದ ಕೆಲಸಗಳನ್ನು ಹಂಚಿಕೆ ಮಾಡುವ ಬಗ್ಗೆ ಉಪಬಂಧಗಳನ್ನು ರಚಿಸಬಹುದು ಮತ್ತು ಪ್ರತಿಯೊಂದು ನ್ಯಾಯ ಪೀಠವು ವ್ಯವಹರಿಸಬಹುದಾದಂಥ ವಿಷಯಗಳ ಬಗ್ಗೆ ಸಹ ಉಪಬಂಧಿಸಬಹುದು.

**14ಜೆ. ಪ್ರಕರಣಗಳನ್ನು ವರ್ಗಾಯಿಸುವುದಕ್ಕೆ ಅಧ್ಯಕ್ಷನ ಅಧಿಕಾರ.–** ಯಾರೇ ಪಕ್ಷಕಾರರ ಅರ್ಜಿಯ ಮೇಲೆ ಮತ್ತು ಪಕ್ಷಕಾರರಿಗೆ ನೋಟೀಸನ್ನು ನೀಡಿದ ನಂತರ ಮತ್ತು ಯಾರ ಅಹವಾಲನ್ನು ಕೇಳಬೇಕೆಂದು ಅವನು ಇಚ್ಚಿಸುವನೋ ಅವರ ಅಹವಾಲನ್ನು ಕೇಳಿದ ನಂತರ ಅಥವಾ ಅಪೀಲು ನ್ಯಾಯಾಧಿಕರಣದ ಅಧ್ಯಕ್ಷನು, ಒಂದು ನ್ಯಾಯ ಪೀಠದ ಮುಂದೆ ಇತ್ಯರ್ಥದಲ್ಲಿರುವ ಯಾವುದೇ ಪ್ರಕರಣವನ್ನು, ಯಾವುದೇ ಇತರ ನ್ಯಾಯ ಪೀಠಕ್ಕೆ ಅಂಥ ನೋಟೀಸನ್ನು ನೀಡದೆ ತಾನಾಗಿಯೇ ವಿಲೆಗಾಗಿ ವರ್ಗಾವಣೆ ಮಾಡಬಹುದು.

**14ಕೆ. ಬಹುಮತದ ಮೂಲಕ ತೀರ್ಮಾನ.–** ಇಬ್ಬರು ಸದಸ್ಯರನ್ನೊಳಗೊಂಡಿರುವ ನ್ಯಾಯ ಪೀಠದ ಸದಸ್ಯರಲ್ಲಿ ಯಾವುದೇ ಅಂಶದ ಬಗ್ಗೆ ಭಿನ್ನಾಭಿಪ್ರಾಯ ಇದ್ದಾಗ, ಅವರು, ತಮ್ಮಲ್ಲಿ ಯಾವ ಅಂಶ ಅಥವಾ ಅಂಶಗಳ ಬಗ್ಗೆ ಭಿನ್ನಾಭಿಪ್ರಾಯವಿದೆ ಎಂಬುದನ್ನು ಹೇಳತಕ್ಕದ್ದು ಮತ್ತು ಅಪೀಲು ನ್ಯಾಯಾಧಿಕರಣದ ಅಧ್ಯಕ್ಷನಿಗೆ ಉಲ್ಲೇಖವನ್ನು ಮಾಡತಕ್ಕದ್ದು, ಅವನು, ಆ ಅಂಶ ಅಥವಾ ಅಂಶಗಳ ಬಗ್ಗೆ ವಿಚಾರಣೆ ಮಾಡತಕ್ಕದ್ದು ಮತ್ತು ಅಂಥ ಅಂಶ ಅಥವಾ ಅಂಶಗಳನ್ನು, ಅದನ್ನು ಮೊದಲು ವಿಚಾರಣೆ ಮಾಡಿದವರನ್ನೂ ಒಳಗೊಂಡಂತೆ, ಪ್ರಕರಣದ ವಿಚಾರಣೆಯನ್ನು ಮಾಡಿದವರ ಬಹುಮತದ ಅಭಿಪ್ರಾಯಕ್ಕನುಸಾರವಾಗಿ ತೀರ್ಮಾನಿಸತಕ್ಕದ್ದು.

**14ಎಲ್. ಸದಸ್ಯರು, ಇತರರು, ಲೋಕ ನೌಕರರಾಗಿರುವುದು.–** ಅಪೀಲು ನ್ಯಾಯಾಧಿಕರಣದ ಅಧ್ಯಕ್ಷನನ್ನು, ಸದಸ್ಯರನ್ನು ಮತ್ತು ಇತರ ಅಧಿಕಾರಿಗಳನ್ನು ಮತ್ತು ನೌಕರರನ್ನು ಭಾರತ ದಂಡ ಸಂಹಿತೆಯ (1860ರ 45) 21ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಲೋಕನೌಕರರೆಂದು ಭಾವಿಸತಕ್ಕದ್ದು.

**14ಎಂ. ಇತ್ಯರ್ಥದಲ್ಲಿರುವ ಪ್ರಕರಣಗಳ ವರ್ಗಾವಣೆ.–** ಈ ಅಧಿನಿಯಮದ ಮೇರೆಗೆ ಅಪೀಲು ನ್ಯಾಯಾಧಿಕರಣವು ಸ್ಥಾಪನೆಯಾದ ದಿನಾಂಕದ ನಿಕಟಪೂರ್ವದಲ್ಲಿ ಪ್ರಾಧಿಕಾರದ ಮುಂದೆ ವಿವಾದಗಳ ನ್ಯಾಯ ನಿರ್ಣಯಕ್ಕಾಗಿ ಇತ್ಯರ್ಥದಲ್ಲಿರುವ ಎಲ್ಲಾ ಅರ್ಜಿಗಳು ಆ ದಿನಾಂಕದಂದು ಅಂಥ ನ್ಯಾಯಾಧಿಕರಣಕ್ಕೆ ವರ್ಗಾವಣೆಗೊಳ್ಳತಕ್ಕದ್ದು:

ಪರಂತು, ಭಾರತ ದೂರ ಸಂಪರ್ಕ ವಿನಿಯಾಮಕ ಪ್ರಾಧಿಕಾರ (ತಿದ್ದುಪಡಿ) ಅಧಿನಿಯಮ, 2000ದ ಪ್ರಾರಂಭದ ನಿಕಟಪೂರ್ವದಲ್ಲಿದ್ದಂತೆ IVನೇ ಅಧ್ಯಾಯದ ಉಪಬಂಧಗಳ ಮೇರೆಗೆ ನ್ಯಾಯ ನಿರ್ಣಯಿಸಬೇಕಾಗಿರುವ ಎಲ್ಲಾ ವಿವಾದಗಳನ್ನು, ಈ ಅಧಿನಿಯಮದ ಮೇರೆಗೆ ಅಪೀಲು ನ್ಯಾಯಾಧಿಕರಣವು ಸ್ಥಾಪನೆಯಾಗುವವರೆಗೆ, ಆ ಅಧ್ಯಾಯದಲ್ಲಿ ಒಳಗೊಂಡಿರುವ ಉಪಬಂಧಗಳಿಗನುಸಾರವಾಗಿ ಪ್ರಾಧಿಕಾರವು ನ್ಯಾಯ ನಿರ್ಣಯ ಮಾಡುವುದು ಮುಂದುವರಿಯತಕ್ಕದ್ದು:

ಮತ್ತೂ ಪರಂತು, ಮೊದಲನೇ ಪರಂತುಕದಲ್ಲಿ ಉಲ್ಲೇಖಿಸಿದ ಎಲ್ಲಾ ಪ್ರಕರಣಗಳನ್ನು, 14ನೇ ಪ್ರಕರಣದ ಮೇರೆಗೆ ಅಪೀಲು ನ್ಯಾಯಾಧಿಕರಣದ ಸ್ಥಾಪನೆಯಾದ ಕೂಡಲೇ ಪ್ರಾಧಿಕಾರವು ಅದಕ್ಕೆ ವರ್ಗಾಯಿಸತಕ್ಕದ್ದು;

**14ಎನ್. ಅಪೀಲುಗಳ ವರ್ಗಾವಣೆ.–** (1) ಭಾರತ ದೂರ ಸಂಪರ್ಕ ವಿನಿಯಾಮಕ ಪ್ರಾಧಿಕಾರ (ತಿದ್ದುಪಡಿ) ಅಧಿನಿಯಮ, 2000ದ ಪ್ರಾರಂಭದ ನಿಕಟಪೂರ್ವದಲ್ಲಿ ಉಚ್ಚ ನ್ಯಾಯಾಲಯದ ಮುಂದೆ ಇತ್ಯರ್ಥದಲ್ಲಿರುವ ಎಲ್ಲಾ ಅಪೀಲುಗಳು 14ನೇ ಪ್ರಕರಣದ ಮೇರೆಗೆ ಸ್ಥಾಪನೆಯಾದ ಅಪೀಲು ನ್ಯಾಯಾಧಿಕರಣಕ್ಕೆ ವರ್ಗಾವಣೆಗೊಳ್ಳತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ಯಾವುದೇ ಅಪೀಲು ಉಚ್ಚ ನ್ಯಾಯಾಲಯದಿಂದ ನ್ಯಾಯಾಧಿಕರಣಕ್ಕೆ ವರ್ಗಾವಣೆಗೊಂಡಿರುವಲ್ಲಿ,-

(ಎ) ಅಂಥ ವರ್ಗಾವಣೆಯ ನಂತರ ಸಾಧ್ಯವಾಗಬಹುದಾದಷ್ಟು ಬೇಗನೆ, ಉಚ್ಚ ನ್ಯಾಯಾಲಯವು ಅಂಥ ಅಪೀಲಿನ ದಾಖಲೆಗಳನ್ನು ಅಪೀಲು ನ್ಯಾಯಾಧಿಕರಣಕ್ಕೆ ಕಳುಹಿಸತಕ್ಕದ್ದು; ಮತ್ತು

(ಬಿ) ಅಂಥ ದಾಖಲೆಗಳನ್ನು ಸ್ವೀಕರಿಸಿದ ಮೇಲೆ ಅಪೀಲು ನ್ಯಾಯಾಧಿಕರಣವು, ಸಾಧ್ಯವಾಗಬಹುದಾದಷ್ಟು ಮಟ್ಟಿಗೆ ಆ ವರ್ಗಾವಣೆಗೆ ಮುಂಚೆ ಆ ಅಪೀಲು ಯಾವ ಹಂತವನ್ನು ತಲುಪಿತ್ತೋ ಆ ಹಂತದಿಂದ ಅಥವಾ ಯಾವುದೇ ಮುಂಚಿನ ಹಂತದಿಂದ ಅಥವಾ ಅಪೀಲು ನ್ಯಾಯಾಧಿಕರಣವು ತಾನು ಸೂಕ್ತವೆಂದು ಭಾವಿಸಬಹುದಾದಂತೆ ಪುನ: ಹೊಸದಾಗಿ ಆ ಅಪೀಲಿನ ಬಗ್ಗೆ ವ್ಯವಹರಿಸುವುದನ್ನು ಮುಂದುವರಿಸತಕ್ಕದ್ದು.

**15. ಸಿವಿಲ್ ನ್ಯಾಯಾಲಯಕ್ಕೆ ಅಧಿಕಾರ ವ್ಯಾಪ್ತಿ ಇಲ್ಲ.–** ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಯಾವ ವಿಷಯಕ್ಕೆ ಸಂಬಂಧಿಸಿದಂತೆ ನಿರ್ಧರಿಸಲು ಅಪೀಲು ನ್ಯಾಯಾಧಿಕರಣಕ್ಕೆ ಅಧಿಕಾರ ನೀಡಲಾಗಿದೆಯೋ ಆ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ದಾವೆಯನ್ನು ಅಥವಾ ವ್ಯವಹರಣೆಯನ್ನು ಪುರಸ್ಕರಿಸಲು ಯಾವುದೇ ಸಿವಿಲ್ ನ್ಯಾಯಾಲಯವು ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕದ್ದಲ್ಲ ಮತ್ತು ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಪ್ರದಾನ ಮಾಡಲಾದ ಯಾವುದೇ ಅಧಿಕಾರಕ್ಕನುಸಾರವಾಗಿ ಕೈಗೊಳ್ಳಲಾದ ಅಥವಾ ಕೈಗೊಳ್ಳಬೇಕಾದ ಯಾವುದೇ ಕ್ರಮಕ್ಕೆ ಸಂಬಂಧಿಸಿದಂತೆ ಯಾವುದೇ ನ್ಯಾಯಾಲಯವು ಅಥವಾ ಇತರ ಪ್ರಾಧಿಕಾರವು ಯಾವುದೇ ನಿರ್ಬಂಧಕಾಜ್ಞೆಯನ್ನು ಮಂಜೂರು ಮಾಡತಕ್ಕದ್ದಲ್ಲ.

**16. ಅಪೀಲು ನ್ಯಾಯಾಧಿಕರಣದ ಪ್ರಕ್ರಿಯೆ ಮತ್ತು ಅಧಿಕಾರಗಳು.–** (1) ಅಪೀಲು ನ್ಯಾಯಾಧಿಕರಣವು ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರಲ್ಲಿ (1908ರ 5) ವಿಧಿಸಿದ ಪ್ರಕ್ರಿಯೆಗೆ ಬದ್ಧವಾಗಿರತಕ್ಕದ್ದಲ್ಲ, ಆದರೆ ಸ್ವಾಭಾವಿಕ ನ್ಯಾಯ ತತ್ವಗಳಿಂದ ಮಾರ್ಗದರ್ಶನ ಪಡೆಯತಕ್ಕದ್ದು ಮತ್ತು ಈ ಅಧಿನಿಯಮದ ಇತರ ಉಪಬಂಧಗಳಿಗೊಳಪಟ್ಟು, ಅಪೀಲು ನ್ಯಾಯಾಧಿಕರಣವು ತನ್ನದೇ ಆದ ಪ್ರಕ್ರಿಯೆಯನ್ನು ವಿನಿಯಮನ ಗೊಳಿಸುವುದಕ್ಕೆ ಅಧಿಕಾರಗಳನ್ನು ಹೊಂದಿರತಕ್ಕದ್ದು.

(2) ಅಪೀಲು ನ್ಯಾಯಾಧಿಕರಣವು, ಈ ಅಧಿನಿಯಮದ ಮೇರೆಗೆ ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವ ಉದ್ದೇಶಗಳಿಗಾಗಿ, ಈ ಕೆಳಕಂಡ ವಿಷಯಗಳಿಗೆ ಸಂಬಂಧಿಸಿದಂತೆ, ದಾವೆಯ ಅಧಿವಿಚಾರಣೆ ನಡೆಸುವಾಗ, ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ (1908ರ 5) ಮೇರೆಗೆ ಸಿವಿಲ್ ನ್ಯಾಯಾಲಯದಲ್ಲಿ ನಿಹಿತವಾಗಿರುವಂಥದೇ ಅಧಿಕಾರಗಳನ್ನು ಹೊಂದಿರತಕ್ಕದ್ದು, ಎಂದರೆ:-

(ಎ) ಯಾರೇ ವ್ಯಕ್ತಿಯನ್ನು ಸಮನು ಮಾಡುವುದು ಮತ್ತು ಅವನ ಹಾಜರಾತಿಯನ್ನು ಒತ್ತಾಯಿಸುವುದು ಮತ್ತು ಪ್ರಮಾಣ ಮಾಡಿಸಿ ಅವನನ್ನು ಪರೀಕ್ಷಿಸುವುದು;

(ಬಿ) ದಸ್ತಾವೇಜುಗಳನ್ನು ಶೋಧನೆ ಮಾಡುವುದನ್ನು ಮತ್ತು ಅವುಗಳನ್ನು ಹಾಜರುಪಡಿಸುವುದನ್ನು ಅಗತ್ಯಪಡಿಸುವುದು;

(ಸಿ) ಅಫಿಡಾವಿಟ್ಟುಗಳ ಮೇಲೆ ಸಾಕ್ಷ್ಯವನ್ನು ಸ್ವೀಕರಿಸುವುದು;

(ಡಿ) ಭಾರತ ಸಾಕ್ಷ್ಯ ಅಧಿನಿಯಮ, 1872ರ (1872ರ 1) 123ನೇ ಮತ್ತು 124ನೇ ಪ್ರಕರಣಗಳ ಉಪಬಂಧಗಳಿಗೊಳಪಟ್ಟು, ಯಾವುದೇ ಕಚೇರಿಯಿಂದ ಯಾವುದೇ ಸಾರ್ವಜನಿಕ ದಾಖಲೆಯನ್ನು ಅಥವಾ ದಸ್ತಾವೇಜನ್ನು ಅಥವಾ ಅಂಥ ದಾಖಲೆಯ ಅಥವಾ ದಸ್ತಾವೇಜಿನ ಪ್ರತಿಯನ್ನು ಕಡ್ಡಾಯವಾಗಿ ಕೋರುವುದು;

(ಇ) ಸಾಕ್ಷಿದಾರರ ಅಥವಾ ದಸ್ತಾವೇಜುಗಳ ಪರೀಕ್ಷೆಗಾಗಿ ಕಮೀಷನ್ನುಗಳನ್ನು ಹೊರಡಿಸುವುದು;

(ಎಫ್) ತನ್ನ ತೀರ್ಮಾನಗಳನ್ನು ಪುನರಾವಲೋಕನ ಮಾಡುವುದು;

(ಜಿ) ತಪ್ಪಿದ್ದಕ್ಕಾಗಿ ಅರ್ಜಿಯನ್ನು ವಜಾ ಮಾಡುವುದು ಅಥವಾ ಅದನ್ನು ಏಕಪಕ್ಷೀಯವಾಗಿ ತೀರ್ಮಾನಿಸುವುದು;

(ಹೆಚ್) ತಪ್ಪಿದ್ದಕ್ಕಾಗಿ ಯಾವುದೇ ಅರ್ಜಿಯನ್ನು ವಜಾ ಮಾಡಿದ ಯಾವುದೇ ಆದೇಶವನ್ನು ಅಥವಾ ಏಕಪಕ್ಷೀಯವಾಗಿ ಮಾಡಿದ ಯಾವುದೇ ಆದೇಶವನ್ನು ರದ್ದುಪಡಿಸುವುದು; ಮತ್ತು

(ಐ) ನಿಯಮಿಸಬಹುದಾದಂಥ ಯಾವುದೇ ಇತರ ವಿಷಯ.

(3) ಅಪೀಲು ನ್ಯಾಯಾಧಿಕರಣದ ಮುಂದಿರುವ ಪ್ರತಿಯೊಂದು ವ್ಯವಹರಣೆಯನ್ನು ಭಾರತ ದಂಡ ಸಂಹಿತೆಯ (1860ರ 45) 193ನೇ ಮತ್ತು 228ನೇ ಪ್ರಕರಣಗಳ ಅರ್ಥ ವ್ಯಾಪ್ತಿಯೊಳಗೆ ಮತ್ತು 196ನೇ ಪ್ರಕರಣದ ಉದ್ದೇಶಗಳಿಗಾಗಿ, ನ್ಯಾಯಿಕ ವ್ಯವಹರಣೆಯೆಂದು ಭಾವಿಸತಕ್ಕದ್ದು ಮತ್ತು ಅಪೀಲು ನ್ಯಾಯಾಧಿಕರಣವನ್ನು ದಂಡ ಪ್ರಕ್ರಿಯಾ ಸಂಹಿತೆ, 1973ರ (1974ರ 2) 195ನೇ ಪ್ರಕರಣದ ಮತ್ತು ಅಧ್ಯಾಯ XXVIರ ಉದ್ದೇಶಗಳಿಗಾಗಿ ಸಿವಿಲ್ ನ್ಯಾಯಾಲಯವೆಂದು ಭಾವಿಸತಕ್ಕದ್ದು.

**17. ಕಾನೂನು ಸಮ್ಮತ ಪ್ರಾತಿನಿಧ್ಯಕ್ಕೆ ಹಕ್ಕು.–** ಅರ್ಜಿದಾರನು ಅಥವಾ ಅಪೀಲುದಾರನು, ಅಪೀಲು ನ್ಯಾಯಾಧಿಕರಣದ ಮುಂದೆ ತನ್ನ ಅಥವಾ ಅದರ ಪ್ರಕರಣವನ್ನು ಮಂಡಿಸಲು, ಖುದ್ದಾಗಿ ಹಾಜರಾಗಬಹುದು ಅಥವಾ ಒಬ್ಬರು ಅಥವಾ ಹೆಚ್ಚು ಚಾರ್ಟರ್ಡ್ ಅಕೌಂಟೆಂಟರಿಗೆ ಅಥವಾ ಕಂಪನಿ ಕಾರ್ಯದರ್ಶಿಗಳಿಗೆ ಅಥವಾ ಕಾಸ್ಟ್ ಅಕೌಂಟೆಂಟರಿಗೆ ಅಥವಾ ನ್ಯಾಯವಾದಿಗಳಿಗೆ ಅಥವಾ ಅದರ ಯಾರೇ ಅಧಿಕಾರಿಗಳಿಗೆ ಹಾಜರಾಗುವುದಕ್ಕೆ ಅಧಿಕಾರ ನೀಡಬಹುದು.

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ,–

(ಎ) "ಚಾರ್ಟರ್ಡ್ ಅಕೌಂಟೆಂಟ್" ಎಂದರೆ ಚಾರ್ಟರ್ಡ್ ಅಕೌಂಟೆಂಟ್‌ರ ಅಧಿನಿಯಮ, 1949ರ (1949ರ 38) 2ನೇ ಪ್ರಕರಣದ (1)ನೇ ಉಪಪ್ರಕರಣದ (ಬಿ) ಖಂಡದಲ್ಲಿ ಪರಿಭಾಷಿಸಿದಂತೆ ಮತ್ತು ಆ ಅಧಿನಿಯಮದ 6ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ವೃತ್ತಿ ಪ್ರಮಾಣಪತ್ರವನ್ನು ಪಡೆದಿರುವ ಚಾರ್ಟರ್ಡ್ ಅಕೌಂಟೆಂಟ್ ಎಂದು ಅರ್ಥ;

(ಬಿ) "ಕಂಪನಿ ಕಾರ್ಯದರ್ಶಿ" ಎಂದರೆ ಕಂಪನಿ ಕಾರ್ಯದರ್ಶಿಗಳ ಅಧಿನಿಯಮ, 1980ರ (1980ರ 56) 2ನೇ ಪ್ರಕರಣದ (1)ನೇ ಉಪಪ್ರಕರಣದ (ಸಿ) ಖಂಡದಲ್ಲಿ ಪರಿಭಾಷಿಸಿರುವಂತೆ ಮತ್ತು ಆ ಅಧಿನಿಯಮದ 6ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ವೃತ್ತಿ ಪ್ರಮಾಣಪತ್ರವನ್ನು ಪಡೆದಿರುವ ಕಂಪನಿ ಕಾರ್ಯದರ್ಶಿ ಎಂದು ಅರ್ಥ;

(ಸಿ) "ಕಾಸ್ಟ್ ಅಕೌಂಟೆಂಟ್" ಎಂದರೆ ಕಾಸ್ಟ್ ಮತ್ತು ವರ್ಕ್ಸ್ ಅಕೌಂಟೆಂಟರ ಅಧಿನಿಯಮ, 1959ರ (1959ರ 23) 2ನೇ ಪ್ರಕರಣದ (1)ನೇ ಉಪಪ್ರಕರಣದ (ಬಿ) ಖಂಡದಲ್ಲಿ ಪರಿಭಾಷಿಸಿರುವಂತೆ ಮತ್ತು ಆ ಅಧಿನಿಯಮದ 6ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ವೃತ್ತಿ ಪ್ರಮಾಣಪತ್ರವನ್ನು ಪಡೆದಿರುವ ಕಾಸ್ಟ್ ಅಕೌಂಟೆಂಟ್ ಎಂದು ಅರ್ಥ;

(ಡಿ) "ಕಾನೂನು ವೃತ್ತಿಗ" ಎಂದರೆ ನ್ಯಾಯವಾದಿ, ವಕೀಲ ಅಥವಾ ಯಾವುದೇ ಉಚ್ಚ ನ್ಯಾಯಾಲಯದ ಅಟಾರ್ನಿ ಎಂದು ಅರ್ಥ, ಮತ್ತು ಅದು ವೃತ್ತಿಯಲ್ಲಿ ತೊಡಗಿರುವ ಪ್ಲೀಡರನನ್ನೂ ಒಳಗೊಳ್ಳುತ್ತದೆ.

**18. ಸರ್ವೋಚ್ಚ ನ್ಯಾಯಾಲಯಕ್ಕೆ ಅಪೀಲು.–** (1) ಸಿವಿಲ್ ಪ್ರಕ್ರಿಯಾ ಸಂಹಿತೆ, 1908 ರಲ್ಲಿ (1908ರ 5) ಅಥವಾ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಆ ಸಂಹಿತೆಯ 100ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಒಂದು ಅಥವಾ ಹೆಚ್ಚು ಆಧಾರಗಳ ಮೇಲೆ ಅಪೀಲು ನ್ಯಾಯಾಧಿಕರಣದ ವಾದಕಾಲೀನ ಆದೇಶವಲ್ಲದ ಯಾವುದೇ ಆದೇಶದ ವಿರುದ್ಧ ಸರ್ವೋಚ್ಚ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಲು ಅವಕಾಶವಿರತಕ್ಕದ್ದು.

(2) ಪಕ್ಷಕಾರರ ಸಮ್ಮತಿಯೊಂದಿಗೆ ಅಪೀಲು ನ್ಯಾಯಾಧಿಕರಣವು ಮಾಡಿದ ಯಾವುದೇ ತೀರ್ಮಾನ ಅಥವಾ ಆದೇಶದ ವಿರುದ್ಧ ಯಾವುದೇ ಅಪೀಲನ್ನು ಸಲ್ಲಿಸಲು ಅವಕಾಶವಿರತಕ್ಕದ್ದಲ್ಲ.

(3) ಈ ಪ್ರಕರಣದ ಮೇರೆಗಿನ ಪ್ರತಿಯೊಂದು ಅಪೀಲನ್ನು, ಯಾವ ತೀರ್ಮಾನ ಅಥವಾ ಆದೇಶದ ವಿರುದ್ಧ ಆ ಅಪೀಲನ್ನು ಸಲ್ಲಿಸಲಾಗಿದೆಯೋ ಆ ತೀರ್ಮಾನ ಅಥವಾ ಆದೇಶದ ದಿನಾಂಕದಿಂದ ತೊಂಬತ್ತು ದಿನಗಳ ಅವಧಿಯೊಳಗೆ ಸಲ್ಲಿಸತಕ್ಕದ್ದು:

ಪರಂತು, ಸರ್ವೋಚ್ಚ ನ್ಯಾಯಾಲಯವು, ತೊಂಬತ್ತು ದಿವಸಗಳ ಸದರಿ ಅವಧಿಯು ಮುಕ್ತಾಯವಾದ ನಂತರವೂ ಸಾಕಷ್ಟು ಕಾರಣದಿಂದಾಗಿ ಅಪೀಲುದಾರನಿಗೆ ಸಕಾಲದಲ್ಲಿ ಅಪೀಲನ್ನು ಸಲ್ಲಿಸುವುದಕ್ಕೆ ಅಡ್ಡಿಯುಂಟಾಗಿತ್ತೆಂದು ಮನದಟ್ಟಾದರೆ, ಅಪೀಲನ್ನು ಪುರಸ್ಕರಿಸತಕ್ಕದ್ದು.

**19. ಅಪೀಲು ನ್ಯಾಯಾಧಿಕರಣವು ಮಾಡಿದ ಆದೇಶಗಳು ಡಿಕ್ರಿಯಂತೆ ಜಾರಿಗೊಳಿಸುವಂಥವುಗಳಾಗಿರುತ್ತವೆ.–** (1) ಈ ಅಧಿನಿಯಮದ ಮೇರೆಗೆ ಅಪೀಲು ನ್ಯಾಯಾಧಿಕರಣವು ಮಾಡಿದ ಆದೇಶವು ಸಿವಿಲ್ ನ್ಯಾಯಾಲಯದ ಡಿಕ್ರಿಯಂತೆ ಅಪೀಲು ನ್ಯಾಯಾಧಿಕರಣವು ಜಾರಿಗೊಳಿಸುವಂಥದ್ದು ಆಗಿರತಕ್ಕದ್ದು, ಮತ್ತು ಈ ಉದ್ದೇಶಕ್ಕಾಗಿ, ಅಪೀಲು ನ್ಯಾಯಾಧಿಕರಣವು ಸಿವಿಲ್ ನ್ಯಾಯಾಲಯದ ಎಲ್ಲಾ ಅಧಿಕಾರಗಳನ್ನು ಹೊಂದಿರತಕ್ಕದ್ದು.

(2) (1)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಅಪೀಲು ನ್ಯಾಯಾಧಿಕರಣವು ತಾನು ಮಾಡಿದ ಯಾವುದೇ ಆದೇಶವನ್ನು ಸ್ಥಳೀಯ ಅಧಿಕಾರ ವ್ಯಾಪ್ತಿ ಹೊಂದಿರುವ ಸಿವಿಲ್ ನ್ಯಾಯಾಲಯಕ್ಕೆ ವರ್ಗಾಯಿಸಬಹುದು ಮತ್ತು ಆ ಸಿವಿಲ್ ನ್ಯಾಯಾಲಯವು, ಆ ನ್ಯಾಯಾಲಯವು ಮಾಡಿದ ಡಿಕ್ರಿಯಂತೆಯೇ ಆ ಆದೇಶವನ್ನು ಜಾರಿಗೊಳಿಸತಕ್ಕದ್ದು.

**20. ಅಪೀಲು ನ್ಯಾಯಾಧಿಕರಣದ ಆದೇಶಗಳನ್ನು ಪಾಲಿಸಲು ಉದ್ದೇಶಪೂರ್ವಕ ವಿಫಲತೆಗೆ ದಂಡನೆ.–** ಯಾರೇ ವ್ಯಕ್ತಿಯು, ಅಪೀಲು ನ್ಯಾಯಾಧಿಕರಣದ ಆದೇಶವನ್ನು ಪಾಲಿಸಲು ಉದ್ದೇಶಪೂರ್ವಕವಾಗಿ ವಿಫಲನಾದಾಗ, ಅವನು ಒಂದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಮತ್ತು ಎರಡನೇ ಅಥವಾ ತರುವಾಯದ ಅಪರಾಧವನ್ನು ಮಾಡಿದ ಸಂದರ್ಭದಲ್ಲಿ ಎರಡು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ

ಜುಲ್ಮಾನೆಯಿಂದ ಮತ್ತು ಉಲ್ಲಂಘನೆಯು ಮುಂದುವರಿದ ಸಂದರ್ಭದಲ್ಲಿ, ಅಂಥ ತಪ್ಪು ಮುಂದುವರಿದ ಪ್ರತಿಯೊಂದು ದಿನಕ್ಕೆ ಎರಡು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಹೆಚ್ಚಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

## ಅಧ್ಯಾಯ –V

## ಹಣಕಾಸು, ಲೆಕ್ಕಪತ್ರಗಳು ಮತ್ತು ಲೆಕ್ಕ ಪರಿಶೋಧನೆ

**21. ಕೇಂದ್ರ ಸರ್ಕಾರದಿಂದ ಅನುದಾನಗಳು.–** ಸಂಸತ್ತು ಈ ಬಗ್ಗೆ ಕಾನೂನಿನ ಮೂಲಕ ಯುಕ್ತ ಹಣ ಹಂಚಿಕೆ ಮಾಡಿದ ನಂತರ, ಪ್ರಾಧಿಕಾರದ ಅಧಿಕಾರಿಗಳಿಗೆ ಮತ್ತು ಇತರ ನೌಕರರಿಗೆ ಅಥವಾ ಅವರಿಗೆ ಸಂಬಂಧಿಸಿದಂತೆ ಸಂದಾಯ ಮಾಡಬೇಕಾದ ಸಂಬಳಗಳನ್ನು, ಭತ್ಯೆಗಳನ್ನು ಮತ್ತು ನಿವೃತ್ತಿ ವೇತನವನ್ನೂ ಒಳಗೊಂಡಂತೆ ಅಧ್ಯಕ್ಷರಿಗೆ ಮತ್ತು ನೌಕರರಿಗೆ ಸಂದಾಯ ಮಾಡಬೇಕಾದ ಸಂಬಳವನ್ನು ಮತ್ತು ಭತ್ಯೆಗಳನ್ನು ನೀಡಲು ಅಗತ್ಯವಿರುವಂಥ ಹಣದ ಮೊತ್ತಗಳನ್ನು ಕೇಂದ್ರ ಸರ್ಕಾರವು, ಅನುದಾನವಾಗಿ ಪ್ರಾಧಿಕಾರಕ್ಕೆ ಕೊಡಬಹುದು.

**22. ನಿಧಿ.–** (1) ಭಾರತ ದೂರ ಸಂಪರ್ಕ ವಿನಿಯಾಮಕ ಪ್ರಾಧಿಕಾರದ ಸಾಮಾನ್ಯ ನಿಧಿ ಎಂದು ಕರೆಯಲಾಗುವ ನಿಧಿಯನ್ನು ರಚಿಸತಕ್ಕದ್ದು ಮತ್ತು ಅದಕ್ಕೆ,–

(ಎ) ಈ ಅಧಿನಿಯಮದ ಮೇರೆಗೆ ಪ್ರಾಧಿಕಾರವು ಸ್ವೀಕರಿಸುವ ಎಲ್ಲಾ ಅನುದಾನಗಳನ್ನು, ಫೀಜುಗಳನ್ನು ಮತ್ತು ಶುಲ್ಕಗಳನ್ನು; ಮತ್ತು

(ಬಿ) ಕೇಂದ್ರ ಸರ್ಕಾರವು ನಿರ್ಧರಿಸಬಹುದಾದಂಥ ಇತರ ಮೂಲಗಳಿಂದ ಪ್ರಾಧಿಕಾರವು ಸ್ವೀಕರಿಸುವ ಎಲ್ಲಾ ಮೊತ್ತಗಳನ್ನು

\- ಜಮೆ ಮಾಡತಕ್ಕದ್ದು.

(2) ನಿಧಿಯನ್ನು,–

(ಎ) ಪ್ರಾಧಿಕಾರದ ಅಧಿಕಾರಿಗಳಿಗೆ ಮತ್ತು ಇತರ ನೌಕರರಿಗೆ ಅಥವಾ ಅವರಿಗೆ ಸಂಬಂಧಿಸಿದಂತೆ ಸಂದಾಯವಾಗಬೇಕಾದ ಸಂಬಳಗಳು, ಭತ್ಯೆಗಳು ಮತ್ತು ನಿವೃತ್ತಿ ವೇತನವೂ ಒಳಗೊಂಡಂತೆ ಅಧ್ಯಕ್ಷರಿಗೆ ಮತ್ತು ಸದಸ್ಯರಿಗೆ ಸಂದಾಯವಾಗಬೇಕಾದ ಸಂಬಳಗಳನ್ನು ಮತ್ತು ಭತ್ಯೆಗಳನ್ನು ಮತ್ತು ಆಡಳಿತಾತ್ಮಕ ವೆಚ್ಚಗಳನ್ನು; ಮತ್ತು

(ಬಿ) ಈ ಅಧಿನಿಯಮದ ಮೂಲಕ ಅಧಿಕೃತಗೊಳಿಸಿದ ವಿಷಯಗಳಿಗೆ ಮತ್ತು ಉದ್ದೇಶಗಳಿಗೆ ಸಂಬಂಧಿಸಿದ ಖರ್ಚುಗಳನ್ನು

– ಭರಿಸುವುದಕ್ಕಾಗಿ ವಿನಿಯೋಗಿಸತಕ್ಕದ್ದು.

**23. ಲೆಕ್ಕಪತ್ರಗಳು ಮತ್ತು ಲೆಕ್ಕ ಪರಿಶೋಧನೆ.–** (1) ಪ್ರಾಧಿಕಾರವು ಸರಿಯಾದ ಲೆಕ್ಕಪತ್ರಗಳನ್ನು ಮತ್ತು ಇತರ ಸುಸಂಬದ್ಧ ದಾಖಲೆಗಳನ್ನು ಇಟ್ಟುಕೊಂಡು ಬರತಕ್ಕದ್ದು ಮತ್ತು ಭಾರತದ ಲೆಕ್ಕ ನಿಯಂತ್ರಕ ಮತ್ತು ಮಹಾ ಲೆಕ್ಕಪರಿಶೋಧಕನೊಡನೆ ಸಮಾಲೋಚನೆ ನಡೆಸಿ, ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ನಮೂನೆಯಲ್ಲಿ ಲೆಕ್ಕಪತ್ರಗಳ ವಾರ್ಷಿಕ ವಿವರಪಟ್ಟಿಕೆಯನ್ನು ತಯಾರಿಸತಕ್ಕದ್ದು.

(2) ಪ್ರಾಧಿಕಾರದ ಲೆಕ್ಕಪತ್ರಗಳನ್ನು ಭಾರತದ ಲೆಕ್ಕ ನಿಯಂತ್ರಕ ಮತ್ತು ಮಹಾ ಲೆಕ್ಕ ಪರಿಶೋಧಕನು, ತಾನು ನಿರ್ದಿಷ್ಟಪಡಿಸಬಹುದಾದಂಥ ಮಧ್ಯಂತರ ಅವಧಿಗಳಲ್ಲಿ ಲೆಕ್ಕಪರಿಶೋಧನೆ ಮಾಡತಕ್ಕದ್ದು ಮತ್ತು ಅಂಥ ಲೆಕ್ಕಪರಿಶೋಧಕನಿಗೆ ಸಂಬಂಧಿಸಿದಂತೆ ಭರಿಸಿದ ಯಾವುದೇ ವೆಚ್ಚವನ್ನು ಪ್ರಾಧಿಕಾರವು ಭಾರತದ ಲೆಕ್ಕ ನಿಯಂತ್ರಕ ಮತ್ತು ಮಹಾಲೆಕ್ಕಪರಿಶೋಧಕನಿಗೆ ಸಂದಾಯ ಮಾಡತಕ್ಕದ್ದು.

**ವಿವರಣೆ.–** ಸಂದೇಹಗಳ ನಿವಾರಣೆಗಾಗಿ, 11ನೇ ಪ್ರಕರಣದ (1)ನೇ ಉಪಪ್ರಕರಣದ (ಬಿ) ಖಂಡದ ಮತ್ತು (2)ನೇ ಉಪಪ್ರಕರಣದ ಮತ್ತು 13ನೇ ಪ್ರಕರಣದ ಮೇರೆಗೆ ಪ್ರಾಧಿಕಾರವು ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ಕೈಗೊಂಡ ತೀರ್ಮಾನಗಳು ಅಪೀಲು ನ್ಯಾಯಾಧಿಕರಣಕ್ಕೆ ಅಪೀಲು ಮಾಡಬಹುದಾದ ವಿಷಯಗಳಾಗಿದ್ದಲ್ಲಿ ಈ ಪ್ರಕರಣದ ಮೇರೆಗೆ, ಲೆಕ್ಕಪರಿಶೋಧನೆಗೆ ಅವು ಒಳಪಡತಕ್ಕದ್ದಲ್ಲವೆಂದು ಈ ಮೂಲಕ ಘೋಷಿಸಲಾಗಿದೆ.

(3) ಭಾರತದ ಲೆಕ್ಕ ನಿಯಂತ್ರಕ ಮತ್ತು ಮಹಾ ಲೆಕ್ಕಪರಿಶೋಧಕನು ಮತ್ತು ಪ್ರಾಧಿಕಾರದ ಲೆಕ್ಕಪತ್ರಗಳ ಪರಿಶೋಧನೆಗೆ ಸಂಬಂಧಿಸಿದಂತೆ ಅವನಿಂದ ನೇಮಕನಾದ ಯಾರೇ ಇತರ ವ್ಯಕ್ತಿಯು ಪ್ರಾಧಿಕಾರದ ಅಂಥ ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ ಸಾಮಾನ್ಯವಾಗಿ, ಸರ್ಕಾರದ ಲೆಕ್ಕಪತ್ರಗಳ ಪರಿಶೋಧನೆಗೆ ಸಂಬಂಧಿಸಿದಂತೆ, ಭಾರತದ ಲೆಕ್ಕ ನಿಯಂತ್ರಕ ಮತ್ತು ಮಹಾ ಲೆಕ್ಕಪರಿಶೋಧಕನು ಹೊಂದಿರುವಂಥವೇ ಹಕ್ಕುಗಳನ್ನು ಮತ್ತು ವಿಶೇಷಾಧಿಕಾರಗಳನ್ನು ಮತ್ತು ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು ವಿಶೇಷವಾಗಿ ಪುಸ್ತಕಗಳನ್ನು, ಲೆಕ್ಕಪತ್ರಗಳನ್ನು, ಸಂಬಂಧಿಸಿದ ವೋಚರುಗಳನ್ನು ಮತ್ತು ಇತರ ದಸ್ತಾವೇಜುಗಳನ್ನು ಮತ್ತು ಕಾಗದಪತ್ರಗಳನ್ನು ಹಾಜರುಪಡಿಸುವಂತೆ ಕೇಳುವ ಮತ್ತು ಪ್ರಾಧಿಕಾರದ ಯಾವುವೇ ಕಛೇರಿಗಳನ್ನು ಪರಿಶೀಲಿಸುವ ಹಕ್ಕನ್ನು ಹೊಂದಿರತಕ್ಕದ್ದು.

(4) ಭಾರತದ ಲೆಕ್ಕ ನಿಯಂತ್ರಕ ಮತ್ತು ಮಹಾ ಲೆಕ್ಕಪರಿಶೋಧಕನು ಅಥವಾ ಈ ಬಗ್ಗೆ ಅವನಿಂದ ನೇಮಕಗೊಂಡ ಯಾರೇ ಇತರ ವ್ಯಕ್ತಿಯು ಪ್ರಮಾಣೀಕರಿಸಿದ ಪ್ರಾಧಿಕಾರದ ಲೆಕ್ಕಪತ್ರಗಳನ್ನು ಲೆಕ್ಕ ಪರಿಶೋಧನೆಯ ವರದಿಯೊಂದಿಗೆ ಕೇಂದ್ರ ಸರ್ಕಾರಕ್ಕೆ ಪ್ರತಿ ವರ್ಷವೂ ಕಳುಹಿಸಿಕೊಡತಕ್ಕದ್ದು ಮತ್ತು ಸರ್ಕಾರವು ಅದನ್ನು ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇರಿಸತಕ್ಕದ್ದು.

**24. ಕೇಂದ್ರ ಸರ್ಕಾರಕ್ಕೆ ವಿವರ ಪಟ್ಟಿಕೆಗಳು, ಇತ್ಯಾದಿಗಳನ್ನು ಒದಗಿಸುವುದು.–** (1) ಪ್ರಾಧಿಕಾರವು, ದೂರಸಂಪರ್ಕ ಸೇವೆಗಳ ಬೆಳವಣಿಗೆ ಮತ್ತು ಅಭಿವೃದ್ಧಿಗಾಗಿ ಯಾವುದೇ ಪ್ರಸ್ತಾವಿತ ಅಥವಾ ಅಸ್ತಿತ್ವದಲ್ಲಿರುವ ಕಾರ್ಯಕ್ರಮಕ್ಕೆ ಸಂಬಂಧಿಸಿದ, ಕಾಲಕಾಲಕ್ಕೆ ಕೇಂದ್ರ ಸರ್ಕಾರವು ಅಗತ್ಯಪಡಿಸುವ ವರದಿಗಳನ್ನು ಮತ್ತು ವಿವರಪಟ್ಟಿಕೆಗಳನ್ನು ಮತ್ತು ಅಂಥ ವಿವರಗಳನ್ನು ನಿಯಮಿಸಬಹುದಾದಂತೆ ಅಥವಾ ಕೇಂದ್ರ ಸರ್ಕಾರವು ನಿರ್ದೇಶಿಸಬಹುದಾದಂತೆ, ಅಂಥ ಕಾಲದಲ್ಲಿ ಮತ್ತು ಅಂಥ ನಮೂನೆಯಲ್ಲಿ ಮತ್ತು ವಿಧಾನದಲ್ಲಿ ಕೇಂದ್ರ ಸರ್ಕಾರಕ್ಕೆ ಒದಗಿಸತಕ್ಕದ್ದು.

(2) ಪ್ರಾಧಿಕಾರವು, ವರ್ಷಕ್ಕೆ ಒಂದು ಸಲ ನಿಯಮಿಸಬಹುದಾದ ನಮೂನೆಯಲ್ಲಿ ಮತ್ತು ಅಂಥ ಕಾಲದಲ್ಲಿ, ಅದರ ಹಿಂದಿನ ವರ್ಷದ ಕಾರ್ಯಚಟುವಟಿಕೆಗಳ ಬಗ್ಗೆ ಸಂಕ್ಷಿಪ್ತವಾದ ವಾರ್ಷಿಕ ವರದಿಯನ್ನು ತಯಾರಿಸತಕ್ಕದ್ದು ಮತ್ತು ವರದಿಯ ಪ್ರತಿಗಳನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸತಕ್ಕದ್ದು.

(3) (2)ನೇ ಉಪಪ್ರಕರಣದ ಮೇರೆಗೆ ಸ್ವೀಕರಿಸಿದ ವರದಿಯ ಪ್ರತಿಯನ್ನು, ಅದನ್ನು ಸ್ವೀಕರಿಸಿದ ನಂತರ ಸಾಧ್ಯವಾಗಬಹುದಾದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇರಿಸತಕ್ಕದ್ದು.

## ಅಧ್ಯಾಯ –VI
## ಸಂಕೀರ್ಣ

**25. ನಿರ್ದೇಶನಗಳನ್ನು ನೀಡಲು ಕೇಂದ್ರ ಸರ್ಕಾರದ ಅಧಿಕಾರ.–** (1) ಕೇಂದ್ರ ಸರ್ಕಾರವು, ಕಾಲಕಾಲಕ್ಕೆ, ಭಾರತದ ಸಾರ್ವಭೌಮತೆಯ ಮತ್ತು ಅಖಂಡತೆಯ, ರಾಷ್ಟ್ರದ ಭದ್ರತೆಯ, ವಿದೇಶಗಳೊಂದಿಗಿನ ಸ್ನೇಹಪರ ಸಂಬಂಧದ, ಸಾರ್ವಜನಿಕ ಸುವ್ಯವಸ್ಥೆಯ, ಸಭ್ಯತೆಯ ಅಥವಾ ನೈತಿಕತೆಯ ಹಿತಾಸಕ್ತಿಗಾಗಿ ಅಗತ್ಯವೆಂದು ತಾನು ಭಾವಿಸಬಹುದಾದಂಥ ನಿರ್ದೇಶನಗಳನ್ನು ಪ್ರಾಧಿಕಾರಕ್ಕೆ ನೀಡಬಹುದು.

(2) ಮೇಲೆ ಹೇಳಿದ ಉಪಬಂಧಗಳಿಗೆ ಬಾಧಕವಾಗದಂತೆ, ಪ್ರಾಧಿಕಾರವು, ತನ್ನ ಅಧಿಕಾರಗಳನ್ನು ಚಲಾಯಿಸುವಾಗ ಅಥವಾ ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಾಗ, ಕೇಂದ್ರ ಸರ್ಕಾರವು ನೀತಿಗೆ ಸಂಬಂಧಿಸಿದ ಪ್ರಶ್ನೆಗಳ ಮೇಲೆ ಅದಕ್ಕೆ ಕಾಲಕಾಲಕ್ಕೆ ಲಿಖಿತದಲ್ಲಿ ನೀಡಬಹುದಾದಂಥ ನಿರ್ದೇಶನಗಳಿಗೆ ಬದ್ಧವಾಗಿರತಕ್ಕದ್ದು:

ಪರಂತು, ಈ ಉಪಪ್ರಕರಣದ ಮೇರೆಗೆ ಯಾವುದೇ ನಿರ್ದೇಶನವನ್ನು ನೀಡುವುದಕ್ಕೆ ಮುಂಚೆ, ತನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಪ್ರಾಧಿಕಾರಕ್ಕೆ ಸಾಧ್ಯವಿರುವಷ್ಟು ಮಟ್ಟಿಗೆ ಅವಕಾಶವನ್ನು ನೀಡತಕ್ಕದ್ದು.

(3) ಯಾವುದೇ ಪ್ರಶ್ನೆಯು ನೀತಿಗೆ ಸಂಬಂಧಿಸಿದೆಯೇ ಅಥವಾ ಅಲ್ಲವೇ ಎಂಬ ಬಗ್ಗೆ ಕೇಂದ್ರ ಸರ್ಕಾರದ ತೀರ್ಮಾನವೇ ಅಂತಿಮವಾಗಿರತಕ್ಕದ್ದು.

**26. ಪ್ರಾಧಿಕಾರದ ಸದಸ್ಯರು, ಅಧಿಕಾರಿಗಳು ಮತ್ತು ನೌಕರರು ಲೋಕ ನೌಕರರಾಗಿರುವುದು.–** ಈ ಅಧಿನಿಯಮದ ಯಾವುವೇ ಉಪಬಂಧಗಳಿಗೆ ಅನುಸಾರವಾಗಿ ಕಾರ್ಯ ನಿರ್ವಹಿಸುವಾಗ ಅಥವಾ ಕಾರ್ಯನಿರ್ವಹಿಸುವುದಾಗಿ ತಾತ್ಪರ್ಯವಾಗುವ ಪ್ರಾಧಿಕಾರದ ಎಲ್ಲಾ ಸದಸ್ಯರನ್ನು, ಅಧಿಕಾರಿಗಳನ್ನು ಮತ್ತು ಇತರ ನೌಕರರನ್ನು, ಭಾರತ ದಂಡ ಸಂಹಿತೆಯ (1860 ರ 45) 21ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಲೋಕ ನೌಕರರೆಂದು ಭಾವಿಸತಕ್ಕದ್ದು.

**27. ಅಧಿಕಾರ ವ್ಯಾಪ್ತಿಗೆ ಪ್ರತಿಷೇಧ.–** ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಯಾವ ವಿಷಯವನ್ನು ನಿರ್ಣಯಿಸಲು ಪ್ರಾಧಿಕಾರಕ್ಕೆ ಅಧಿಕಾರ ನೀಡಲಾಗಿದೆಯೋ ಆ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ಸಿವಿಲ್ ನ್ಯಾಯಾಲಯವು ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕದ್ದಲ್ಲ.

**28. ಸದ್ಭಾವನೆಯಿಂದ ಕೈಗೊಂಡ ಕ್ರಮದ ಸಂರಕ್ಷಣೆ.–** ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಿದ ನಿಯಮಗಳ ಅಥವಾ ವಿನಿಯಮನಗಳ ಮೇರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ಅಥವಾ ಪ್ರಾಧಿಕಾರದ ಅಥವಾ ಕೇಂದ್ರ ಸರ್ಕಾರದ ಯಾರೇ ಅಧಿಕಾರಿಯ ಅಥವಾ ಪ್ರಾಧಿಕಾರದ ಯಾರೇ ಸದಸ್ಯನ, ಅಧಿಕಾರಿಯ ಅಥವಾ ಇತರ ನೌಕರರ ವಿರುದ್ಧ, ಯಾವುದೇ ದಾವೆಯನ್ನು, ಪ್ರಾಸಿಕ್ಯೂಷನನ್ನು ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

**29. ಪ್ರಾಧಿಕಾರದ ನಿರ್ದೇಶನಗಳ ಉಲ್ಲಂಘನೆಗೆ ದಂಡ.–** ಯಾರೇ ವ್ಯಕ್ತಿಯು, ಪ್ರಾಧಿಕಾರದ ನಿರ್ದೇಶನಗಳನ್ನು ಉಲ್ಲಂಘಿಸಿದರೆ, ಆ ವ್ಯಕ್ತಿಯು ಒಂದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಎರಡನೇ ಅಥವಾ ತರುವಾಯದ ಅಪರಾಧದ ಸಂದರ್ಭದಲ್ಲಿ ಎರಡು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಉಲ್ಲಂಘನೆಯು ಮುಂದುವರಿದ ಸಂದರ್ಭದಲ್ಲಿ, ಅಂಥ ತಪ್ಪು ಮುಂದುವರಿದ ಪ್ರತಿಯೊಂದು ದಿನಕ್ಕೆ ಎರಡು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಹೆಚ್ಚಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**30. ಕಂಪನಿಗಳಿಂದ ಅಪರಾಧಗಳು.–** (1) ಈ ಅಧಿನಿಯಮದ ಮೇರೆಗೆ ಕಂಪನಿಯು ಅಪರಾಧವನ್ನು ಮಾಡಿರುವಲ್ಲಿ, ಅಪರಾಧವು ನಡೆದ ಕಾಲದಲ್ಲಿ ಆ ಕಂಪನಿಯ ಪ್ರಭಾರದಲ್ಲಿದ್ದ ಮತ್ತು ಕಂಪನಿಯ ವ್ಯವಹಾರಗಳನ್ನು ನಡೆಸಲು ಕಂಪನಿಗೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಮತ್ತು ಆ ಕಂಪನಿಯನ್ನು ಆ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ಅವನು ಮತ್ತು ಅದು ವ್ಯವಹರಣೆಗೆ ಮತ್ತು ದಂಡನೆಗೆ ಗುರಿಯಾಗತಕ್ಕದ್ದು:

ಪರಂತು, ಈ ಉಪಪ್ರಕರಣದಲ್ಲಿರುವುದು ಯಾವುದೂ, ಅಂಥ ಯಾರೇ ವ್ಯಕ್ತಿಯು, ಅಪರಾಧವು ತನ್ನ ತಿಳಿವಳಿಕೆಗೆ ಬಾರದೆ ನಡೆದಿದೆ ಎಂದು ಅಥವಾ ಅಂಥ ಅಪರಾಧವು ನಡೆಯುವುದನ್ನು ತಡೆಗಟ್ಟಲು ತಾನು ಎಲ್ಲಾ ಯುಕ್ತ ಜಾಗರೂಕತೆಯನ್ನು ವಹಿಸಿದ್ದೆನೆಂದು ರುಜುವಾತುಪಡಿಸಿದರೆ ಈ ಅಧಿನಿಯಮದಲ್ಲಿ ಉಪಬಂಧಿಸಿದ ಯಾವುದೇ ದಂಡನೆಗೆ ಅವನನ್ನು ಗುರಿಪಡಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಮೇರೆಗೆ ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ ಮತ್ತು ಆ ಅಪರಾಧವು ಕಂಪನಿಯ ಯಾರೇ ನಿರ್ದೇಶಕನ, ವ್ಯವಸ್ಥಾಪಕನ, ಕಾರ್ಯದರ್ಶಿಯ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ಅಥವಾ ಅವನ ನಿರ್ಲಕ್ಷ್ಯತೆಯ ಕಾರಣದಿಂದ ನಡೆದಿದೆಯೆಂದು ರುಜುವಾತಾದಲ್ಲಿ, ಅಂಥ ನಿರ್ದೇಶಕನನ್ನು, ವ್ಯವಸ್ಥಾಪಕನನ್ನು, ಕಾರ್ಯದರ್ಶಿಯನ್ನು ಅಥವಾ ಇತರ ಅಧಿಕಾರಿಯನ್ನು ಸಹ ಆ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ಅವನು ವ್ಯವಹರಣೆಗೆ ಅಥವಾ ದಂಡನೆಗೆ ಗುರಿಯಾಗತಕ್ಕದ್ದು.

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ,–

(ಎ) "ಕಂಪನಿ" ಎಂದರೆ ಯಾವುದೇ ನಿಗಮಿತ ನಿಕಾಯ ಎಂದು ಅರ್ಥ ಮತ್ತು ಅದು ಫರ್ಮನ್ನು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ಬಿ) ಒಂದು ಫರ್ಮಿಗೆ ಸಂಬಂಧಿಸಿದಂತೆ "ನಿರ್ದೇಶಕ" ಎಂದರೆ ಫರ್ಮಿನ ಒಬ್ಬ ಪಾಲುದಾರ ಎಂದು ಅರ್ಥ.

**31. ಸರ್ಕಾರದ ಇಲಾಖೆಗಳಿಂದ ಅಪರಾಧಗಳು.–** (1) ಈ ಅಧಿನಿಯಮದ ಮೇರೆಗೆ ಅಪರಾಧವನ್ನು ಸರ್ಕಾರದ ಯಾವುದೇ ಇಲಾಖೆಯು ಮಾಡಿರುವಲ್ಲಿ, ಆ ಇಲಾಖಾ ಮುಖ್ಯಸ್ಥನನ್ನು ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ಆ ಅಪರಾಧವು ತನ್ನ ತಿಳಿವಳಿಕೆಗೆ ಬಾರದೆ ನಡೆದಿದೆ ಎಂದು ಅಥವಾ ಅಂತಹ ಅಪರಾಧ ನಡೆಯುವುದನ್ನು ತಡೆಗಟ್ಟಲು ತಾನು ಎಲ್ಲಾ ಯುಕ್ತ ಜಾಗರೂಕತೆಯನ್ನು ವಹಿಸಿದ್ದೆನೆಂದು ಅವನು ರುಜುವಾತುಪಡಿಸದ ಹೊರತು, ವ್ಯವಹರಣೆಗೆ ಮತ್ತು ದಂಡನೆಗೆ ಗುರಿಯಾಗತಕ್ಕದ್ದು.

(2) (1)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಸರ್ಕಾರದ ಇಲಾಖೆಯು ಮಾಡಿರುವಲ್ಲಿ, ಮತ್ತು ಆ ಅಪರಾಧವು ಇಲಾಖಾ ಮುಖ್ಯಸ್ಥನಲ್ಲದ, ಯಾರೇ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ಅಥವಾ ಅವನ ನಿರ್ಲಕ್ಷ್ಯತೆಯ ಕಾರಣದಿಂದ ನಡೆದಿದೆಯೆಂದು ರುಜುವಾತಾದರೆ, ಅಂಥ ಅಧಿಕಾರಿಯನ್ನು ಆ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ವ್ಯವಹರಣೆಗೆ ಮತ್ತು ದಂಡನೆಗೆ ಗುರಿಪಡಿಸತಕ್ಕದ್ದು.

**32. ಸಂಪತ್ತು ಮತ್ತು ಆದಾಯದ ಮೇಲಿನ ತೆರಿಗೆಯಿಂದ ವಿನಾಯಿತಿ.–** ಸಂಪತ್ತು ತೆರಿಗೆ ಅಧಿನಿಯಮ, 1957ರಲ್ಲಿ (1957ರ 27) ಆದಾಯ ತೆರಿಗೆ ಅಧಿನಿಯಮ, 1961ರಲ್ಲಿ (1961ರ 43) ಅಥವಾ ಸಂಪತ್ತಿನ, ಆದಾಯದ, ಲಾಭದ ಅಥವಾ ಪ್ರಯೋಜನದ ಮೇಲಿನ ತೆರಿಗೆಗೆ ಸಂಬಂಧಿಸಿದಂತೆ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಅಧಿನಿಯಮಿತಿಯಲ್ಲಿ ಏನೇ ಒಳಗೊಂಡಿದ್ದರೂ; ಪ್ರಾಧಿಕಾರವು ತಾನು ಗಳಿಸಿದ ಸಂಪತ್ತಿಗೆ, ಆದಾಯಕ್ಕೆ, ಲಾಭಕ್ಕೆ ಅಥವಾ ಪ್ರಯೋಜನಕ್ಕೆ ಸಂಬಂಧಿಸಿದಂತೆ ಸಂಪತ್ತು ತೆರಿಗೆಯನ್ನು, ಆದಾಯ ತೆರಿಗೆಯನ್ನು ಅಥವಾ ಯಾವುದೇ ಇತರ ತೆರಿಗೆಯನ್ನು ಸಂದಾಯ ಮಾಡುವುದಕ್ಕೆ ಬದ್ಧವಾಗಿರತಕ್ಕದ್ದಲ್ಲ.

**33. ಪ್ರತ್ಯಾಯೋಜನೆ.–** ಪ್ರಾಧಿಕಾರವು, ಸಾಮಾನ್ಯ ಅಥವಾ ವಿಶೇಷ ಲಿಖಿತ ಆದೇಶದ ಮೂಲಕ, ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳು, ಯಾವುವಾದರೂ ಇದ್ದರೆ, ಅವುಗಳಿಗೆ ಒಳಪಟ್ಟು, ಪ್ರಾಧಿಕಾರದ ಯಾರೇ ಸದಸ್ಯನಿಗೆ, ಅಧಿಕಾರಿಗೆ ಅಥವಾ ಇತರ ಯಾರೇ ವ್ಯಕ್ತಿಗೆ, ಈ ಅಧಿನಿಯಮದ ಮೇರೆಗೆ ಅವಶ್ಯವೆಂದು ತಾನು ಭಾವಿಸಬಹುದಾದಂಥ ತನ್ನ ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು (ಅಧ್ಯಾಯ IVರ ಮೇರೆಗೆ ವಿವಾದವನ್ನು ಇತ್ಯರ್ಥಪಡಿಸುವ ಮತ್ತು 36ನೇ ಪ್ರಕರಣದ ಮೇರೆಗೆ ವಿನಿಯಮನವನ್ನು ರಚಿಸುವ ಅಧಿಕಾರವನ್ನು ಹೊರತುಪಡಿಸಿ) ಪ್ರತ್ಯಾಯೋಜಿಸಬಹುದು.

**34. ಅಪರಾಧಗಳ ಸಂಜ್ಞೇಯತೆ.–** (1) ಪ್ರಾಧಿಕಾರವು ಮಾಡಿದ ಫಿರ್ಯಾದಿನ ಮೇಲಲ್ಲದೆ ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಅಥವಾ ವಿನಿಯಮನಗಳ ಮೇರೆಗೆ ದಂಡನೀಯವಾದ ಯಾವುದೇ ಅಪರಾಧದ ಸಂಜ್ಞೇಯತೆಯನ್ನು ಯಾವುದೇ ನ್ಯಾಯಾಲಯವು ತೆಗೆದುಕೊಳ್ಳತಕ್ಕದ್ದಲ್ಲ.

(2) ಮುಖ್ಯ ಮಹಾನಗರ ಮ್ಯಾಜಿಸ್ಟ್ರೇಟ್ ಅಥವಾ ಪ್ರಥಮ ದರ್ಜೆಯ ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನಿಗಿಂತ ಕೆಳದರ್ಜೆಯ ಯಾವುದೇ ನ್ಯಾಯಾಲಯವು ಈ ಅಧಿನಿಯಮದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧದ ಅಧಿವಿಚಾರಣೆಯನ್ನು ಮಾಡತಕ್ಕದ್ದಲ್ಲ.

**35. ನಿಯಮಗಳನ್ನು ರಚಿಸಲು ಅಧಿಕಾರ.–** (1) ಕೇಂದ್ರ ಸರ್ಕಾರವು, ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ಅಧಿಸೂಚನೆಯ ಮೂಲಕ, ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ, ಮತ್ತು ಮೇಲೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳು, ಈ ಮುಂದಿನ ಎಲ್ಲಾ ವಿಷಯಗಳಿಗೆ ಅಥವಾ ಯಾವುದೇ ವಿಷಯಕ್ಕೆ ಉಪಬಂಧ ಕಲ್ಪಿಸಬಹುದು, ಎಂದರೆ:–

(ಎ) 5ನೇ ಪ್ರಕರಣದ (5)ನೇ ಉಪಪ್ರಕರಣದ ಮೇರೆಗೆ ಅಧ್ಯಕ್ಷನಿಗೆ ಮತ್ತು ಸದಸ್ಯನಿಗೆ ಸಂದಾಯ ಮಾಡಬೇಕಾದ ಸಂಬಳ ಮತ್ತು ಭತ್ಯೆಗಳು ಹಾಗೂ ಇತರ ಸೇವಾ ಷರತ್ತುಗಳು;

(ಎಎ) 5ನೇ ಪ್ರಕರಣದ (6ಎ) ಉಪಪ್ರಕರಣದ ಮೇರೆಗೆ ಅರೆಕಾಲಿಕ ಸದಸ್ಯರಿಗೆ ಸಂದಾಯ ಮಾಡಬೇಕಾದ ಭತ್ಯೆಗಳು;

(ಬಿ) 6ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಅಧ್ಯಕ್ಷನ ಅಧಿಕಾರಗಳು ಮತ್ತು ಪ್ರಕಾರ್ಯಗಳು;

(ಸಿ) 7ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ವಿಚಾರಣೆಯನ್ನು ನಡೆಸಲು ಕಾರ್ಯವಿಧಾನ;

(ಸಿಎ) 10ನೇ ಪ್ರಕರಣದ (2)ನೇ ಉಪ ಪ್ರಕರಣದ ಮೇರೆಗೆ ಪ್ರಾಧಿಕಾರದ ಅಧಿಕಾರಿಗಳ ಮತ್ತು ಇತರ ನೌಕರರ ಸಂಬಳ ಮತ್ತು ಭತ್ಯೆಗಳು ಹಾಗೂ ಇತರ ಸೇವಾ ಷರತ್ತುಗಳು;

(ಡಿ) 12ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಇಟ್ಟುಕೊಂಡು ಬರಲು ಅಗತ್ಯಪಡಿಸಿದ ಲೆಕ್ಕದ ಪುಸ್ತಕಗಳ ಮತ್ತು ಇತರ ದಸ್ತಾವೇಜುಗಳ ಪ್ರವರ್ಗ;

(ಡಿಎ) 14ಎ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆನ ನಮೂನೆ, ಅದರ ಪರಿಶೀಲನೆಯ ವಿಧಾನ ಮತ್ತು ಫೀಜು;

(ಡಿಬಿ) 14ಇ ಪ್ರಕರಣದ ಮೇರೆಗೆ ಅಪೀಲು ನ್ಯಾಯಾಧಿಕರಣದ ಅಧ್ಯಕ್ಷನಿಗೆ ಮತ್ತು ಇತರ ಸದಸ್ಯರಿಗೆ ಸಂದಾಯ ಮಾಡಬೇಕಾದ ಸಂಬಳ ಮತ್ತು ಭತ್ಯೆಗಳು ಹಾಗೂ ಇತರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು;

(ಡಿಸಿ) 14 ಹೆಚ್ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಅಪೀಲು ನ್ಯಾಯಾಧಿಕರಣದ ಅಧಿಕಾರಿಗಳ ಮತ್ತು ನೌಕರರ ಸಂಬಳ ಮತ್ತು ಭತ್ಯೆಗಳು ಹಾಗೂ ಇತರ ಸೇವಾ ಷರತ್ತುಗಳು;

(ಡಿಡಿ) 16ನೇ ಪ್ರಕರಣದ (2)ನೇ ಉಪಪ್ರಕರಣದ (i)ನೇ ಖಂಡದ ಮೇರೆಗೆ ನಿಯಮಿಸಬೇಕೆಂದು ಅಗತ್ಯಪಡಿಸಿದ, ಸಿವಿಲ್ ನ್ಯಾಯಾಲಯದ ಇತರ ಯಾವುದೇ ಅಧಿಕಾರ;

(ಇ) 15ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಯಾವ ಅವಧಿಯೊಳಗೆ ಅರ್ಜಿಯನ್ನು ಸಲ್ಲಿಸಬೇಕಾಗಿದೆಯೋ ಆ ಅವಧಿ;

(ಎಫ್) 23ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಪ್ರಾಧಿಕಾರದ ಲೆಕ್ಕಪತ್ರಗಳನ್ನು ಇಟ್ಟುಕೊಂಡು ಬರತಕ್ಕ ವಿಧಾನ;

(ಜಿ) 24ನೇ ಪ್ರಕರಣದ (1) ಮತ್ತು (2)ನೇ ಉಪಪ್ರಕರಣಗಳ ಮೇರೆಗೆ ವಿವರ ಪಟ್ಟಿಕೆಗಳನ್ನು ಮತ್ತು ವರದಿಯನ್ನು ಯಾವ ಅವಧಿಯೊಳಗೆ ಮತ್ತು ಯಾವ ನಮೂನೆಯಲ್ಲಿ ಮತ್ತು ಯಾವ ವಿಧಾನದಲ್ಲಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಬೇಕೋ ಆ ಅವಧಿ ಮತ್ತು ಆ ನಮೂನೆ ಮತ್ತು ಆ ವಿಧಾನ;

(ಹೆಚ್) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಯಾವುದೇ ಇತರ ವಿಷಯ, ಅಥವಾ ಯಾವ ಇತರ ವಿಷಯಕ್ಕೆ ಸಂಬಂಧಿಸಿದಂತೆ ನಿಯಮಗಳ ಮೂಲಕ ಉಪಬಂಧವನ್ನು ಮಾಡಬೇಕಾಗಿದೆಯೋ ಆ ಇತರ ವಿಷಯ.

**36. ವಿನಿಯಮನಗಳನ್ನು ರಚಿಸಲು ಅಧಿಕಾರ.–** (1) ಪ್ರಾಧಿಕಾರವು, ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉದ್ದೇಶಗಳನ್ನು ಜಾರಿಗೆ ತರುವುದಕ್ಕಾಗಿ ಈ ಅಧಿನಿಯಮಕ್ಕೆ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳಿಗೆ ಸುಸಂಗತವಾದ ವಿನಿಯಮನಗಳನ್ನು ರಚಿಸಬಹುದು.

(2) ಅಂಥ ವಿನಿಯಮನಗಳು, ವಿಶೇಷವಾಗಿ ಮತ್ತು ಮೇಲೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಈ ಮುಂದಿನ ಎಲ್ಲಾ ವಿಷಯಗಳಿಗೆ ಅಥವಾ ಯಾವುದೇ ವಿಷಯಕ್ಕೆ ಉಪಬಂಧ ಕಲ್ಪಿಸಬಹುದು, ಎಂದರೆ.–

(ಎ) ಪ್ರಾಧಿಕಾರದ ಸಭೆಗಳನ್ನು ನಡೆಸುವ ಕಾಲ ಮತ್ತು ಸ್ಥಳಗಳು ಮತ್ತು ಕಾರ್ಯಕಲಾಪ ನಡೆಸುವುದಕ್ಕೆ ಅಗತ್ಯವಾದ ಕೋರಮ್ಮನ್ನು ಒಳಗೊಂಡಂತೆ, 8ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಅಂಥ ಸಭೆಗಳಲ್ಲಿ ಅನುಸರಿಸಬೇಕಾದ ಕಾರ್ಯವಿಧಾನ;

(ಬಿ) 8ನೇ ಪ್ರಕರಣದ (4)ನೇ ಉಪಪ್ರಕರಣದ ಮೇರೆಗೆ ಪ್ರಾಧಿಕಾರದ ಸಭೆಗಳಲ್ಲಿ ಕಾರ್ಯಕಲಾಪಗಳ ನಿರ್ವಹಣೆ;

(ಸಿ) [X X X]

(ಡಿ) 11ನೇ ಪ್ರಕರಣದ (1)ನೇ ಉಪಪ್ರಕರಣದ (ಬಿ) ಖಂಡದ (vii)ನೇ ಉಪಖಂಡದ ಮೇರೆಗೆ ಯಾವ ವಿಷಯಗಳಿಗೆ ಸಂಬಂಧಿಸಿದಂತೆ ಪ್ರಾಧಿಕಾರವು ರಿಜಿಸ್ಟರನ್ನು ಇಟ್ಟುಕೊಂಡು ಬರಬೇಕಾಗಿದೆಯೋ ಆ ವಿಷಯಗಳು;

(ಇ) 11ನೇ ಪ್ರಕರಣದ (1ನೇ) ಉಪಪ್ರಕರಣದ (ಬಿ) ಖಂಡದ (viii)ನೇ ಉಪಖಂಡದ ಮೇರೆಗೆನ ರಿಜಿಸ್ಟರಿನ ಪ್ರತಿಯನ್ನು ಪಡೆಯುವುದಕ್ಕೆ ಸಂಬಂಧಿಸಿದಂತೆ ಫೀಜು ವಿಧಿಸುವುದು ಮತ್ತು ಅದನ್ನು ಪಡೆಯಲು ಪೂರೈಸಬೇಕಾದಂಥ ಇತರ ಅಗತ್ಯತೆಗಳನ್ನು ಗೊತ್ತುಪಡಿಸುವುದು;

(ಎಫ್) 11ನೇ ಪ್ರಕರಣದ (1)ನೇ ಉಪಪ್ರಕರಣದ (ಸಿ) ಖಂಡದ ಮೇರೆಗೆ ಫೀಜು ಮತ್ತು ಇತರ ಶುಲ್ಕಗಳ ವಿಧಿಸುವಿಕೆ;

**37. ಸಂಸತ್ತಿನ ಮುಂದೆ ನಿಯಮಗಳನ್ನು ಮತ್ತು ವಿನಿಯಮನಗಳನ್ನು ಇರಿಸುವುದು.–** ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು ಮತ್ತು ಪ್ರತಿಯೊಂದು ವಿನಿಯಮನವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು, ಮತ್ತು ಅದನ್ನು ಹಾಗೆ ಇಡಲಾದ ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಅಧಿವೇಶನದ ನಿಕಟೋತ್ತರದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ ಆ ನಿಯಮದಲ್ಲಿ ಅಥವಾ ವಿನಿಯಮನದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮತ್ತು ವಿನಿಯಮನವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಅಥವಾ ವಿನಿಯಮನವು, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಸಂದರ್ಭಾನುಸಾರ, ಪರಿಣಾಮಕಾರಿಯಾಗಿರತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು, ಆ ನಿಯಮದ ಅಥವಾ ವಿನಿಯಮನದ ಮೇರೆಗೆ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

**38. ಕೆಲವು ಕಾನೂನುಗಳ ಅನ್ವಯ.–** ಈ ಅಧಿನಿಯಮದ ಉಪಬಂಧಗಳು, ಭಾರತ ಟೆಲಿಗ್ರಾಫ್ ಅಧಿನಿಯಮ, 1885ರ (1885ರ 13) ಮತ್ತು ಭಾರತ ವೈರ್‌ಲೆಸ್ ಟೆಲಿಗ್ರಾಫಿ ಅಧಿನಿಯಮ, 1933ರ (1933ರ 17) ಉಪಬಂಧಗಳಿಗೆ ಪೂರಕವಾಗಿ ಇರತಕ್ಕದ್ದು ಮತ್ತು ವಿಶೇಷವಾಗಿ, ಈ ಅಧಿನಿಯಮದಲ್ಲಿರುವುದು ಯಾವುದೂ, ಅಂಥ ಪ್ರಾಧಿಕಾರದ ಅಧಿಕಾರ ವ್ಯಾಪ್ತಿಯೊಳಗೆ ಬರುವ ಯಾವುದೇ ಸ್ಥಳಕ್ಕೆ ಸಂಬಂಧಿಸಿದಂತೆ ಟೆಲಿಗ್ರಾಫ್ ಪ್ರಾಧಿಕಾರವು ಚಲಾಯಿಸಬೇಕೆಂದು ಅಥವಾ ನಿರ್ವಹಿಸಬೇಕೆಂದು ಅಗತ್ಯಪಡಿಸಲಾದ ಯಾವುದೇ ಅಧಿಕಾರ ವ್ಯಾಪ್ತಿಗೆ, ಅಧಿಕಾರಗಳಿಗೆ ಮತ್ತು ಪ್ರಕಾರ್ಯಗಳಿಗೆ ಬಾಧಕವನ್ನುಂಟುಮಾಡತಕ್ಕದ್ದಲ್ಲ.

**39. ತೊಂದರೆಗಳನ್ನು ನಿವಾರಿಸಲು ಅಧಿಕಾರ.–** (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೆ ತರುವಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ಕೇಂದ್ರ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ, ಪ್ರಕಟಿಸಿದ ಆದೇಶದ ಮೂಲಕ, ತೊಂದರೆಗಳನ್ನು ನಿವಾರಿಸುವುದಕ್ಕೆ ಅವಶ್ಯವೆಂದು ಕಂಡು ಬರುವ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದಂಥ ಉಪಬಂಧಗಳನ್ನು ರಚಿಸಬಹುದು:

ಪರಂತು, ಈ ಪ್ರಕರಣದ ಮೇರೆಗೆ ಯಾವುದೇ ಆದೇಶವನ್ನು ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಎರಡು ವರ್ಷಗಳ ಮುಕ್ತಾಯದ ನಂತರ ಮಾಡತಕ್ಕದ್ದಲ್ಲ.

(2) ಈ ಪ್ರಕರಣದ ಮೇರೆಗೆ ಮಾಡಿದ ಪ್ರತಿಯೊಂದು ಆದೇಶವನ್ನು, ಅದನ್ನು ಮಾಡಿದ ನಂತರ ಸಾಧ್ಯವಾಗಬಹುದಾದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇರಿಸತಕ್ಕದ್ದು.

**40. ನಿರಸನ ಮತ್ತು ಉಳಿಸುವಿಕೆ.– (1)** ಭಾರತ ದೂರ ಸಂಪರ್ಕ ವಿನಿಯಮನ ಪ್ರಾಧಿಕಾರ ಅಧ್ಯಾದೇಶ, 1997ನ್ನು (1997 ಅಧ್ಯಾದೇಶ 11) ಈ ಮೂಲಕ ನಿರಸನಗೊಳಿಸಲಾಗಿದೆ.

(2) ಹಾಗೆ ನಿರಸನಗೊಳಿಸಿದ್ದರೂ, ಸದರಿ ಅಧ್ಯಾದೇಶದ ಮೇರೆಗೆ ಮಾಡಿದ ಯಾವುದೇ ಕಾರ್ಯವನ್ನು ಅಥವಾ ಕೈಗೊಂಡ ಯಾವುದೇ ಕ್ರಮವನ್ನು ಈ ಅಧಿನಿಯಮದ ಸಂವಾದಿ ಉಪಬಂಧಗಳ ಮೇರೆಗೆ ಮಾಡಿದ ಕಾರ್ಯವೆಂದು ಅಥವಾ ಕೈಗೊಳ್ಳಲಾದ ಕ್ರಮವೆಂದು ಭಾವಿಸತಕ್ಕದ್ದು.

* * *